ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃ ಭೂಮಿ

ಕನ್ನಡದಿನ ಪತ್ರಿಕೆ

ರಾಯಚೂರಿನಿಂದ ರಾಜ್ಯದವರೆಗೆ

ಸಂಪಾಕದರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issue : 161 | ದಿನಾಂಕ : 11-04-2026 Date : 11-04-2026 | ಶನಿವಾರ Saturday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ಹೆಂಡತಿ ಮನೆಗೆ ಅಕ್ರಮ ಪ್ರವೇಶ: ಆರೋಪಿ ವಿರುದ್ಧ ದೂರು ದಾಖಲು

**ರಾಯಚೂರು,ಏ.10-**ಹೆಂಡತಿಯ ಮನೆಯಲ್ಲಿ ಅಕ್ರಮ ವಾಗಿ ಪ್ರವೇಶಿಸಿ ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ಯುವಕನ ವಿರುದ್ಧ ಪ್ರಕರಣ ದಾಖಲಾಗಿರುವ ಘಟನೆ ನಗರದಲ್ಲಿ ಏ.6ರಂದು ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಧಾನೀಶ ಎಂಬ ಆರೋಪಿ ಇಫ್ಕಾರುದ್ದೀನ್ ಅಹ್ಮದ್ ಉರ್ಫ್ ಮದನಿ ಅವರ ಹೆಂಡತಿಯ ಎಲ್.ಬಿ.ಎಸ್. ನಗರದ ಬಾಡಿಗೆ ಮನೆಯಲ್ಲಿ ಏ.6 ರಂದು ಮಧ್ಯರಾತ್ರಿ 1 ಗಂಟೆಯ ಸುಮಾರಿಗೆ ಅಕ್ರಮವಾಗಿ ಮನೆಗೆ ಪ್ರವೇಶಿಸಿದ್ದಾರೆ ಎಂದು ಇಫ್ಕಾರುದ್ದಿನ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಂದು ರಾತ್ರಿ ಹೆಂಡತಿಯ ಮನೆಗೆ ಪತಿಯು ಹೋದಾಗ ಧಾನೀಶ ಇರುವುದನ್ನು ಕಂಡು ↘ 2

## 1ನೇ ತರಗತಿಗೆ 6 ವರ್ಷ ಕಡ್ಡಾಯ ನಿಯಮ ಸಡಿಲಿಸಿ 2 ತಿಂಗಳು ವಿನಾಯಿತಿ: ಪೋಷಕ ಸಂಘಟನೆಗಳಿಗೆ ನಿರಾಸೆ

**ಬೆಂಗಳೂರು,ಏ.10-**1ನೇ ತರಗತಿಗೆ ಸೇರಲು ಕಡ್ಡಾಯವಾಗಿ 6 ವರ್ಷ ದಾಟಿರಬೇಕೆಂಬ ನಿಯಮ ಸಡಿಲಿಸಿ 60 ದಿನಗಳ ವಿನಾಯಿತಿ ನೀಡಿ ರಾಜ್ಯ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಈ ಮೂಲಕ ಇದನ್ನು 5.5 ವರ್ಷಕ್ಕೆ ಇಳಿಸಬೇಕೆಂಬ ಪೋಷಕ ಸಂಘಟನೆಗಳ ಹೋರಾಟಗಾರರಿಗೆ ನಿರಾಸೆಯಾಗಿದೆ.

2026-27ನೇ ಶೈಕ್ಷಣಿಕ ಸಾಲಿಗೆ ಸೀಮಿತವಾಗಿ ವಯೋಮಿತಿ ಸಡಿಲಿಸಲಾಗಿದೆ. ರಾಜ್ಯ ಶಿಕ್ಷಣ ನೀತಿ ಆಯೋಗದ ಶಿಫಾರಸಿನಂತೆ 1ನೇ ತರಗತಿ ಸೇರುವ ಮಕ್ಕಳು ಕಡ್ಡಾಯವಾಗಿ 6 ವರ್ಷ ಪೂರ್ಣಗೊಳಿಸಿರಬೇಕು ಎಂದು ಹೇಳಿತ್ತು. ಕಳೆದ ವರ್ಷ 5.5 ವರ್ಷಕ್ಕೆ ಸರ್ಕಾರ ವಿನಾಯಿತಿ ನೀಡಿತ್ತು. ಪ್ರಸಕ್ತ ಶೈಕ್ಷಣಿಕ ಸಾಲಿನಿಂದ 5.10 ವರ್ಷ ↘ 2

## ಕೆಪಿಸಿಎಲ್ ದಾಖಲೆ: 2025-26ನೇ ಸಾಲಿನಲ್ಲಿ 15,509 ದಶಲಕ್ಷ ಯೂನಿಟ್ ಜಲ ವಿದ್ಯುತ್ ಉತ್ಪಾದನೆ

**ಬೆಂಗಳೂರು,ಏ.10-**ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) 2025-26ನೇ ಸಾಲಿನಲ್ಲಿ 15,509 ದಶಲಕ್ಷ ಯೂನಿಟ್ ಜಲ ವಿದ್ಯುತ್ ಉತ್ಪಾದಿಸುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿದೆ.

3.63 ಗಿಗಾವ್ಯಾಟ್ ವಿದ್ಯುತ್‌ನೊಂದಿಗೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಇತ್ತೀಚೆಗೆ ಕೇಂದ್ರದ ಅಂಕಿ-ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ವರದಿ ನೀಡಿರುವ ಮಧ್ಯೆಯೇ 2025-26ನೇ ಸಾಲಿನಲ್ಲಿ ಕೆಪಿಸಿಎಲ್ ಈ ದಾಖಲೆ ನಿರ್ಮಿಸಿರುವುದು ಹೆಚ್ಚು ಮಹತ್ವ ಪಡೆದಿದೆ.

ಶರಾವತಿ ಕಣಿವೆಯಲ್ಲಿ ನಾಲ್ಕು, ಕಾಳಿ ಕಣಿವೆಯ ನಾಲ್ಕು, ವಾರಾಹಿ ಕಣಿವೆ ಮತ್ತು ಕಾವೇರಿ ಕಣಿವೆಯ ತಲಾ ಎರಡು, ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ತಲಾ ಒಂದು ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ 15,509 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿದೆ. ↘ 2

### ಅಸ್ಸಾಂ ಮುಖ್ಯಮಂತ್ರಿ ಹೀಮತ್ ಬಿಸ್ವಾಸ್ ಶರ್ಮಾ ಹೇಳಿಕೆಗೆ ಖಂಡನೆ

# ಬಿಜೆಪಿಗರು ಕೆಲ ಹುಚ್ಚು ನಾಯಿಗಳನ್ನು ಸಾಕಿ ಮಲ್ಲಿಕಾರ್ಜುನ ಖರ್ಗೆಯವರ ತೇಜೋವಧೆ- ಎ.ವಸಂತಕುಮಾರ ಆರೋಪ

■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.10-**ಬಿಜೆಪಿಗರು, ಆರ್‌ಎಸ್‌ಎಸ್ ಗರೂ ಕೆಲ ಹುಚ್ಚನಾಯಿಗಳನ್ನು ಸಾಕಿದ್ದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ತೇಜೋವಧೆ ಮಾಡುತ್ತಿರುವದು ಖಂಡನೀಯ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಎ.ವಸಂತಕುಮಾರ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ ಅಸ್ಸಾಂ ಮುಖ್ಯಮಂತ್ರಿ ಹೀಮಂತ ಬಿಸ್ವಾ ಶರ್ಮಾ ಇವರು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರ ಕುರಿತು ಹಗುರವಾಗಿ ಮಾತನಾಡಿದ್ದಾರೆ. ಅವರ ಪತ್ನಿಯ ಮೂರು ಪಾಸಪೋರ್ಟ ಹೊಂದಿರುವ ವಿಷಯ ಪ್ರಸ್ತಾಪಿಸಿರುವ ಖರ್ಗೆಯವರನ್ನು ನಿಂದಿಸಿದ್ದಾರೆ. ಅಪಾರ ರಾಜಕೀಯು ಅನುಭವ ಹೊಂದಿದ್ದು ರಾಜಕೀಯ ಜೀವನದಲ್ಲಿ ಯಾವದೇ ಕಪ್ಪು ಚುಕ್ಕೆಯಿಲ್ಲದೇ ಪಾರದರ್ಶಕ ರಾಜಕೀಯವ ಜೀವನ ನಿರ್ವಹಿಸಿರುವ ಮಲ್ಲಿಕಾರ್ಜುನ ಖರ್ಗೆಯವರ ರಾಜಕೀಯ ಜೀವನದಷ್ಟು ಅನುಭವ ಇಲ್ಲದೇ ತನಿಖೆಯಿಂದ ರಕ್ಷಿಸಿಕೊಳ್ಳಲು ಮಾತನಾಡುತ್ತಿದ್ದಾರೆ. ಕ್ರಿಮಿನಲ್ ಹಿನ್ನಲೆಯುಳ್ಳ ಹೀಮಂತ ಬಿಸ್ವಾ ಶರ್ಮ ಅನೇಕ ಪ್ರಕರಣಗಳಲ್ಲಿ ತನಿಖೆ ಎದುರಿಸಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದು ರಾಜಕೀಯ ಜೀವನ ಕಂಡು ಅವರು ಬಿಜೆಪಿ ಸೇರಿ ಕಾಂಗ್ರೆಸ್ ನಾಯಕರನ್ನು ಟೀಕಿಸುವ ಕೆಲಸದಲ್ಲಿ ತೊಡಗಿದ್ದಾರೆ. 3 ಕೋಟಿ ರೂ ನಗದು ಹಣ ಪಡೆಯುವಾಗ ಸಿಕ್ಕಿ ಹಾಕಿರುವ ಅವರು ನಂಬರ್ 1 ಕ್ರಿಮಿನಲ್ ಆಗಿದ್ದಾರೆ ಎಂದು ಏಕವಚನದಲ್ಲಿ ತರಾಟೆಗೆ ತೆಗೆದುಕೊಂಡರು. ಬಿಜೆಪಿಯ ಸಾಕು ನಾಯಿಯಾಗಿ ಮಲ್ಲಿಕಾರ್ಜುನ ಖರ್ಗೆಯ ವ್ಯಕ್ತಿತ್ವದ ಕುರಿತು ಮಾತನಾಡಿದರೆ ಜನತೆ ಒಪ್ಪುವದಿಲ್ಲ ಎಂದು

ಆರ್‌ಎಸ್‌ಎಸ್ ವಿಷಸರ್ಪ ಎಂದು ಹೇಳಿರುವ ಮಲ್ಲಿಕಾರ್ಜುನ ಖರ್ಗೆಯವ ಹೇಳಿಕೆಯನ್ನು ಸಮರ್ಥಿಸಿದ ಅವರು ಸಮಾಜವನ್ನು ಧರ್ಮದ ಆಧಾರದ ಮೇಲೆ ಒಡೆಯದ ಕುರಿತು ಹೇಳುವಾಗ ಉದಾಹರಣೆಗಾಗಿ ಮುಸ್ಲಿಂ ಸಮುದಾಯ ನಮಾಜ್ ಮಾಡುವಾಗ ಸರ್ಪ ಬಂದರೆ ಕೊಲ್ಲುವಂತೆ ಹೇಳಿದ್ದಾರೆ ಹೊರತು ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ಆರ್‌ಎಸ್‌ಎಸ್ ಸಂಘಟನೆಯನ್ನು ಈಗಾಗಲೇ ಎರಡುಬಾರಿ ನಿಷೇಧಿಸಲಾಗಿತ್ತು. ಸುಪ್ರಿಂಕೋರ್ಟಿಗೆ ಮುಚ್ಚಳಿಕೆ ಬರೆದು ಕೊಟ್ಟ ಹಿನ್ನಲೆಯಲ್ಲಿ ನಿಷೇಧ ತೆರವುಗೊಳಿಸಲಾಗಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ನೊಂದಣಿಯೇ ಇಲ್ಲದ ಆರ್‌ಎಸ್‌ಎಸ್ ಬ್ಯಾನ್ ಮಾಡಲು ಒತ್ತಾಯಿಸುವದಾಗಿ ಹೇಳಿದರು.

ಬಾಗಲಕೋಟೆ ಉಪ ಚುನಾಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ ಅವರು ಲಿಂಗಾಯತ ಸಮೂದಾಯ ಕೆಲ ಉಪ ಪಂಗಡಗಳು ಕಾಂಗ್ರೆಸ್ ಬೆಂಬಲಿಸಿಲ್ಲ. ಉಳಿದಂತೆ ಪರಿಶಿಷ್ಟ ಜಾತಿ ಪಂಗಡ, ಹಿಂದುಳಿದ ವರ್ಗಗಳ ವಿಶ್ವಾಸಕ್ಕೆ ↘ 2

## ಸಿರವಾರ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಲೋಕಾಯುಕ್ತ ಬಲೆಗೆ ಸೀನಿಮೀಯ ರೀತಿಯಲ್ಲಿ ಆರೋಪಿಯ ಬಂಧನ

■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.10-**ಲಂಚ ಸ್ವೀಕರಿಸಿದ ಬಳಿಕ ಲೋಕಾಯುಕ್ತ ಪೊಲೀಸರ ಕಣ್ಣಿಗೆ ತಪ್ಪಿಸಿಕೊಂಡು ಪರಾರಿಯಾಗಿದ್ದ ಸಿರವಾರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸುರೇಶ ಶೆಟ್ಟಿ ಅವರನ್ನು ಪೊಲೀಸರು ಕೊನೆಗೂ ವಶಕ್ಕೆ ಪಡೆದಿದ್ದಾರೆ.

ಹೊಸ ಬಡಾವಣೆಯ ನಿವೇಶನಕ್ಕೆ ಇ-ಖಾತೆ (ಫಾರಂ ನಂ.3) ನೀಡಲು 2 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರೆಂದು ಆರೋಪಿಸಲಾಗಿದೆ. ಈ ಸಂಬಂಧ ಸಿರವಾರದ ಜಿ. ರಘುರಾಮರೆಡ್ಡಿ ಅವರು ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು.

ಗುರುವಾರ ಸಂಜೆ ದೂರುದಾರರಿಂದ 1 ಲಕ್ಷ ಲಂಚ ಸ್ವೀಕರಿಸುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಅಧಿಕಾರಿಯನ್ನು ಹಿಡಿಯಲು ಮುಂದಾದಾಗ, ಆತ ಕಾರಿನಲ್ಲಿ ಪರಾರಿಯಾಗಿದ್ದನು. ಬೈಕ್‌ನಲ್ಲಿ ಹಿಂಬಾಲಿಸಿದರೂ ಆತ ತಪ್ಪಿಸಿಕೊಂಡಿದ್ದನು.

ಇದಾದ ಬಳಿಕ ಕಲ್ಮಠ ಆವರಣದಲ್ಲಿ ನಿಲ್ಲಿಸಿದ್ದ ಕಾರಿನ ಸುಳಿವಿನ ಆಧಾರದ ಮೇಲೆ ಪೊಲೀಸರು ತನಿಖೆ ಮುಂದುವರಿಸಿ, ↘ 2

## ಎಸ್‌ಆರ್‌ಪಿಎಸ್ ಕಾಲೇಜಿಗೆ ಉತ್ತಮ ಫಲಿತಾಂಶ, ವಿಜ್ಞಾನದಲ್ಲಿ ವೈಷ್ಣವಿ, ಕಲಾದಲ್ಲಿ ಶರಣಬಸವ, ವಾಣಿಜ್ಯದಲ್ಲಿ ಭೀಮಾಚಾರ್ ಟಾಪರ್

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.10-** ನಗರದ ಎಸ್‌ಆರ್‌ಪಿಯು ಕಾಲೇಜಿನಲ್ಲಿ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಈ ಮೂರು ವಿಭಾಗದ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಎಸ್‌ಆರ್ ಪಿಎಸ್ ಪದವಿ ಪೂರ್ವ ಕಾಲೇಜಿನ ಫಲಿತಾಂಶ ಪ್ರಕಟವಾಗಿದ್ದು ವಿಜ್ಞಾನ ವಿಭಾಗದಲ್ಲಿ ವೈಷ್ಣವಿ 584 ಅಂಕ ಗಳಿಸಿ (ಶೇ.97.3)ರಷ್ಟು ಅಂಕ ಗಳಿಸಿ ಟಾಪರ್ ಆಗಿದ್ದಾರೆ. ಅಭಿನಾಶ 572 (95.33) ಎಂ.ವಿಕಾಸ್ 544 (90.66)ರಷ್ಟು ಅಂಕ ಗಳಿಸಿದ್ದಾರೆ. ಇನ್ನೂ ಕಲಾ ವಿಭಾಗದಲ್ಲಿ ಶರಣಬಸವ 570 ಅಂಕ ಪಡೆದು (ಶೇ.95), ನವೀನ್ 557 (8.92.83) ಹಾಗೂ ಯಂಕಮ್ಮ 544 (90.66) ಅಂಕ ಗಳಿಸಿದರೆ, ವಾಣಿಜ್ಯ ವಿಭಾಗದಲ್ಲಿ ಜಿ.ಭೀಮಾಚಾರ್ 543 (90.50), ಪವಿತ್ರ 527 (5.87.83), ಜಿ.ಮಧುಲತಾ 524 (87.33)ರಷ್ಟು ಅಂಕ ಗಳಿಸಿ ಕಾಲೇಜಿಗೆ ಹಾಗೂ ಪಾಲಕರಿಗೆ ಕೀರ್ತಿ ತಂದಿದ್ದಾರೆ.



ಈ ವಿದ್ಯಾರ್ಥಿಗಳ ಶೈಕ್ಷಣಿಕ ಫಲಿತಾಂಶ ಸಾಧನೆಗೆ ತಾರಾನಾಥ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪಾರಸಮಲ್ ಸುಖಾಣಿ ಹಾಗೂ ಆಡಳಿತ ಮಂಡಳಿ ಸದಸ್ಯರು, ಬೋಧಕರು ಹರ್ಷ ವ್ಯಕ್ತಪಡಿಸಿದ್ದಾರೆ.

## ಮನ್ಸಲಾಪುರು ಗ್ರಾಮದಲ್ಲಿ ನಾಲ್ಕು ಬಣವಿಗೆ ಅಕಸ್ಮಿಕ ಬೆಂಕಿ : ಲಕ್ಷಾಂತರ ಹಾನಿ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.10-**ಅಕಸ್ಮಿಕವಾಗಿ 4 ಬಣವೆಗಳಿಗೆ ಬೆಂಕಿ ತಗುಲಿ ಲಕ್ಷಾಂತರ ನಷ್ಟ ಉಂಟಾಗಿರುವ ಘಟನೆ ತಾಲೂಕಿನ ಮನ್ಸಲಾಪೂರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಜಂಬಲಮ್ಮ ದೇವಸ್ಥಾನದ ಸಮೀಪದಲ್ಲಿ ರೈತ ಯಂಕಪ್ಪ ಅವರ ಎರಡು ಬಣವೆಗಳು ಹಾಗೂ ಭೀಮಯ್ಯ ಎನ್ನುವವರಿಗೆ ಸೇರಿದ ಎರಡು ಬಣವೆಗಳಿಗೆ ಬೆಂಕಿ ತಗುಲಿ ಸಂಪೂರ್ಣ ಬಣವೆಗಳು ಬೆಂಕಿ ಕೆನ್ನಾಲಿಗೆಗೆ ಭಸ್ಮವಾಗಿವೆ. ಹತ್ತಿರದಲ್ಲಿದ್ದ ಹನುಮೇಶ ಎನ್ನುವವರಿಗೆ ಮನೆ ಒಂದು ಭಾಗ ಹಾನಿಯಾಗಿದೆ.

ಘಟನೆ ವಿವರ: ನಿನ್ನೆ ಮದ್ಯಾಹ್ನದ ಸಮಯದಲ್ಲಿ ಆಕಸ್ಮಿಕವಾಗಿ ಬೆಂಕಿ ತಗುಲಿದ್ದು ಬೆಂಕಿಯು ಹತ್ತಿರದಲ್ಲಿ ನಾಲ್ಕು ಬಣವೆಗಳಿಗೆ ↘ 2



## ಏ.12 ರಂದು ರಾಜಕೀಯ ಆರ್ಥಿಕತೆ ಮತ್ತು ಉದ್ಯೋಗ ನೀತಿ ಕುರಿತು ಉಪನ್ಯಾಸ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.10-** ದೇಶದಲ್ಲಿ ಹಸಿವು, ನಿರುದ್ಯೋಗ, ಹಣದುಬ್ಬರ ಹಾಗೂ ಆರೋಗ್ಯ ಸಂಕಷ್ಟಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಆರ್ಥಿಕ ಅಸಮಾನತೆ ತೀವ್ರವಾಗುತ್ತಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿರುವ ನಡುವೆಯೇ, ಈ ಪ್ರಮುಖ ವಿಷಯಗಳ ಕುರಿತು ಚರ್ಚಿಸಲು ರಾಯಚೂರಿನಲ್ಲಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಮುದಾಯ ರಾಯಚೂರು ಸಂಘದ ಅಧ್ಯಕ್ಷ ಪ್ರವೀಣ್ ರೆಡ್ಡಿ ಗುಂಜಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮುದಾಯ ಸಂಘಟನೆಯ ವತಿಯಿಂದ ಏ.12ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕನ್ನಡ ಭವನದಲ್ಲಿ ಕಾರ್ಯಕ್ರಮ ನಡೆಯುತ್ತಿದ್ದು, ರಾಜಕೀಯ ಆರ್ಥಿಕತೆ ಮತ್ತು ಉದ್ಯೋಗ ನೀತಿ ವಿಷಯದ ಕುರಿತಾಗಿ ಹಿರಿಯ ಶಿಕ್ಷಣ ತಜ್ಞರಾದ ಬಿ. ಶ್ರೀಪಾದ ಭಟ್ ಅವರು ಉಪನ್ಯಾಸ ನೀಡಲಿದ್ದಾರೆ.

ದೇಶದಲ್ಲಿ ನಿರುದ್ಯೋಗದ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಜನರ ಜೀವನಮಟ್ಟ ಕುಸಿಯುತ್ತಿದ್ದು, ಆರ್ಥಿಕ ಅಸಮಾನತೆ ಗಂಭೀರ ರೂಪ ಪಡೆದುಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕಿ ಆರ್. ಇಂದಿರಾ ಉದ್ಘಾಟಿಸಲಿದ್ದು, ಕಲಬುರಗಿಯ ಹಿರಿಯ ಚಿಂತಕರಾದ ಆರ್. ಕೆ. ಹುಡುಗಿ ಅಧ್ಯಕ್ಷತೆ ವಹಿಸಲಿದ್ದಾರೆ.

ಸಮುದಾಯ ಸಂಘಟನೆಯ ಗೌರವಾಧ್ಯಕ್ಷರಾದ ಶರಣು ಮಾಲಿಪಾಟೀಲ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

ರಾಯಚೂರಿನ ಸಾಮಾಜಿಕ ಹೋರಾಟಗಾರರು, ಪ್ರಗತಿಪರ ಚಿಂತಕರು, ವಿದ್ಯಾರ್ಥಿ ಯುವಜನರು, ಹಾಗೂ ಸಾರ್ವಜನಿ ಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಮುದಾಯ ಸಂಘಟನೆಯ

ಅಧ್ಯಕ್ಷ ಪ್ರವೀಣ್ ರೆಡ್ಡಿ ಗುಂಜಳ್ಳಿ ಹಾಗೂ ಕಾರ್ಯದರ್ಶಿ ಚಂದ್ರಶೇಖರ್ ನೆಲೆಹಾಳ್ ಭಾಗವಹಿಸಲಿದ್ದಾರೆ.

## ಗ್ಯಾಸ್ ಬ್ಲ್ಯಾಕ್ಲನಲ್ಲಿ ಮಾರಾಟ ಕ್ರಮಕ್ಕೆ ಒತ್ತಾಯ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.12-** ಇಂಡಿಯನ್ ಮತ್ತು ಹೆಚ್.ಪಿ. ಗ್ಯಾಸ್ ಏಜನ್ಸಿಗಳು ಗ್ಯಾಸ್ ಸಿಲೆಂಡರ್ ಗಳನ್ನು ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿದ್ದು ಏಜನ್ಸಿಗಳ ಮೇಲೆ ಸೂಕ್ತ ಕ್ರಮ ಜರುಗಿಸಿ ಏಜನ್ಸಿ ರದ್ದುಪಡಿಸಬೇಕು ಎಂದು ಜಯ ಕರ್ನಾಟಕ ಕರ್ನಾಟಕ ಸಂಘಟನೆ ವತಿಯಿಂದ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ನಗರದಲ್ಲಿ ಇಂಡಿಯನ್ ಮತ್ತು ಹೆಚ್.ಪಿ. ಗ್ಯಾಸ್ ಏಜನ್ಸಿರವರು ಗ್ಯಾಸ್ ಸಿಲೆಂಡರ್‌ಗಳನ್ನು 2000 ದಿಂದ 2500 ರವರೆಗೆ ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿದ್ದು, ಗೃಹಬಳಕೆಯ ಸಿಲೆಂಡರ್ ಗಳನ್ನು ವಾಣಿಜ್ಯಕ್ಕಾಗಿ ಬಳಕೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿ ಗ್ಯಾಸ್ ಏಜನ್ಸಿಗಳಲ್ಲಿ ಬುಕ್ಕಿಂಗ್ ಮಾಡಲು ಜನರು ಸಾಲಾಗಿ ನಿಂತುಕೊಳ್ಳದೆ ಬುಕ್ಕಿಂಗ್ ಮಾಡಲು ಪರದಾಡುತ್ತಿದ್ದಾರೆ. ಇದರಿಂದ ಬಂದಂತ ಮಹಿಳೆಯರಿಗೆ ಬುಕ್ಕಿಂಗ್ ಮಾಡಲು ಅನುಕೂಲ ವಾಗುತ್ತಿಲ್ಲ.

ಸುಲಭವಾಗಿ ಬುಕ್ಕಿಂಗ್ ಮತ್ತು ಸಿಲೆಂಡರ್‌ಗಳನ್ನು ಪಡೆದುಕೊಳ್ಳಲು ಏಜನ್ಸಿರವರು ಭದ್ರತಾ ಸಿಬ್ಬಂದಿ, ಪೋಲಿಸ್ ಬಂದೋ ಬಸ್ತು ವ್ಯವಸ್ಥೆ ಮಾಡದೇ ಇರುವುದರಿಂದ ಸಮಸ್ಯೆ ಉಂಟಾಗಿದೆ.

ಮಹಿಳೆಯವರು ಮತ್ತು ಅಂಗವಿಕಲರು, ಹಿರಿಯ ನಾಗರೀಕರು ಬುಕ್ಕಿಂಗ್ ಮತ್ತು ಸಿಲೆಂಡರ್‌ಗಳನ್ನು ಪಡೆದುಕೊಳ್ಳಲು ತೊಂದರೆ ಅನುಭವಿಸು ವಂತಾಗಿದೆ.

ಗ್ಯಾಸ್ ಬುಕ್ಕಿಂಗ್ ಮತ್ತು ಗ್ಯಾಸ್ ಸಿಲೆಂಡರ್ ಗಳನ್ನು ಪಡೆದುಕೊಳ್ಳುವ ವ್ಯವಸ್ಥೆ ಮಾಡಿಕೊಡಬೇಕು. ಹಾಗೂ ಸಿಲೆಂಬರ್‌ಗಳನ್ನು ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಗೃಹಬಳಕೆ ಸಿಲೆಂಡರ್‌ಗಳನ್ನು ವಾಣಿಜ್ಯಕ್ಕಾಗಿ ಉಪಯೋಗಿಸುತ್ತಿದ್ದು, ಸೂಕ್ತ ರೀತಿಯಲ್ಲಿ ತನಿಖೆ ಕೈಗೊಂಡು ಕಾನೂನು ಕ್ರಮ ಜರುಗಿಸಲು ಮನವಿ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಜಾಫರ್ ಶರೀಫ್, ಸೈಯದ್ ಸೇರಿದಂತೆ ಇತರರು ಇದ್ದರು.

## ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮತದಾರರ ಹೆಸರು ಕೈಬಿಟ್ಟ ಆರೋಪ: ಚುನಾವಣಾ ಆಯೋಗಕ್ಕೆ ಪತ್ರ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.10-**ಪಶ್ಚಿಮ ಬಂಗಾಳದಲ್ಲಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನಂತರ ದೊಡ್ಡ ಪ್ರಮಾಣದಲ್ಲಿ ಮತದಾರರನ್ನು ಪಟ್ಟಿ ಯಿಂದ ಕೈಬಿಟ್ಟಿರುವುದನ್ನು ಖಂಡಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಅವರು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಈ ಬಗ್ಗೆ ಸಿಪಿಐ(ಎಂ) ಜಿಲ್ಲಾ ಸಮಿತಿ ಪ್ರಕಟಣೆ ನೀಡಿದ್ದು, ಎಸ್‌ಐಆರ್ ಪ್ರಕ್ರಿಯೆ ನಿಯಮಿತ ಆಡಳಿತಾತ್ಮಕ ಕ್ರಮಕ್ಕೆ ವಿರುದ್ಧವಾಗಿದ್ದು, ಸಾಮೂಹಿಕವಾಗಿ ಮತದಾನದ ಹಕ್ಕನ್ನು ಕಸಿದುಕೊಳ್ಳುವ ವ್ಯವಸ್ಥಿತ ಪ್ರಯತ್ನವಾಗಿದೆ ಎಂದು ಆರೋಪಿಸಿದೆ.

90 ಲಕ್ಷಕ್ಕಿಂತ ಹೆಚ್ಚು ಮತದಾರರನ್ನು ಪಟ್ಟಿಯಿಂದ ಹೊರಗಿಡಲಾಗಿದೆ ಎಂಬ ವರದಿಗಳು ಆತಂಕಕಾರಿಯಾಗಿದೆ ಎಂದು ತಿಳಿಸಲಾಗಿದೆ. ↘ 2

## ಬಡವರಿಗೆ ವಸತಿ, ನಿವೇಶನ ಒದಗಿಸಲುಆಗ್ರಹಿಸಿ ರಾಜ್ಯದಾದ್ಯಂತ ಪ್ರತಿಭಟನೆ-ಮಾರೆಪ್ಪ ಹರವಿ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.10-**ಚುನಾವಣೆಗೂ ಮೊದಲು ಸರ್ಕಾರಗಳು ವಸತಿ ವಂಚಿತರಿಗೆ ಹಾಗೂ ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ಮತ್ತು ವಸತಿ ನೀಡುವುದಾಗಿ ಸುಳ್ಳು ಭರವಸೆ ನೀಡ್ಡಿ, ಇದೀಗ ಕಾನೂನು ಕಠಿಣವಾಗಿದೆ ಎಂದು ಹೇಳಿ ವಂಚಿಸುತ್ತಿದ್ದಾರೆ. ಕೂಡಲೇ ಕಾನೂನು ಸಡಲಿಕೆ ಮಾಡಿ, ಭೂರಹಿತ ವಸತಿ ರೈತರಿಗೆ ನ್ಯಾಯ ಒದಗಿಸಕೊಡಬೇಕು ಇಲ್ಲವಾದಲ್ಲಿ ಮೇ.1ರಿಂದ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮಾಡು ಇಲ್ಲವೇ ಮಡಿ ಚಳವಳಿ ಭಾಗವಾಗಿ ಅನಿರ್ಧಿಷ್ಠಾವಧಿ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ಸಂಚಾಲಕ ಮಾರೆಪ್ಪ ಹರವಿ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಕಳೆದ 5 ದಶಕಗಳಿಂದ ಲಕ್ಷಾಂತರ ಬಗರ್ ಹುಕುಂ ಸಾಗುವಳಿದಾರರು ಭೂಮಿ ಹಕ್ಕಿಗಾಗಿ ಹಾಗೂ ವಸತಿ ವಂಚಿತರು ಸೂರಿಗಾಗಿ

## ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆಗಳಿಗೆ ಅಂಕಗಳ ಬದಲಿಗೆ ಗ್ರೇಡ್ ಪ್ರಶ್ನಿಸಿದ್ದ ಅರ್ಜಿದಾರರಿಗೆ ₹1 ಲಕ್ಷ ದಂಡ

**ಬೆಂಗಳೂರು,ಏ.10**-ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವ ಸಂಬಂಧ ಸರ್ಕಾರದ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳ ವರದಿ ಆಧರಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಅರ್ಜಿದಾರರಿಗೆ ಹೈಕೋರ್ಟ್ 1 ಲಕ್ಷ ರೂ. ದಂಡ ವಿಧಿಸಿ ಆದೇಶಿಸಿದೆ.

ಬೆಂಗಳೂರಿನ ಹೆಚ್.ಎನ್.ಚಂದನಾ ಮತ್ತು ಎಸ್. ವೆಂಕಟೇಶ್ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಅಲ್ಲದೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗಳಿಗೆ ಅಂಕಗಳ ಬದಲಿಗೆ ಶ್ರೇಣಿಗಳನ್ನು ನೀಡುವ ವ್ಯವಸ್ಥೆಯ ಕುರಿತ ಶಿಕ್ಷಣ ಸಚಿವರ ಹೇಳಿಕೆಗೆ ಸಂಬಂಧಿಸಿದಂತೆ ಪತ್ರಿಕಾ ವರದಿಗಳನ್ನು ಆಧರಿಸಿ ಅರ್ಜಿ ಸಲ್ಲಿಸಲಿದ್ದಾರೆ. ಅರ್ಜಿದಾರರ ಈ ನಡೆ ಅತ್ಯಂತ ಅಗೌರವಯುತವಾಗಿದೆ. ಇಂತಹ ಪತ್ರಿಕಾ ಹೇಳಿಕೆಗಳನ್ನು ರದ್ದುಗೊಳಿಸುವುದಕ್ಕೆ ಹೈಕೋರ್ಟ್‌ಗೆ ಅಸಾಧಾರಣವಾದ ವಿಶೇಷ ನ್ಯಾಯವ್ಯಾಪ್ತಿ ಚಲಾಯಿಸಬೇಕಾಗುತ್ತದೆ ಎಂದು ಪೀಠ ತಿಳಿಸಿದೆ.

ಜೊತೆಗೆ, ಇದೊಂದು ಪ್ರಚಾರಕ್ಕಾಗಿ ಸಲ್ಲಿಸಿರುವ ಅರ್ಜಿಯಾಗಿದ್ದು, ಅರ್ಜಿದಾರರಿಗೆ 50 ಸಾವಿರ ರೂ. ದಂಡ ವಿಧಿಸಲಾಗುವುದು. ದಂಡದ ಮೊತ್ತವನ್ನುಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಬೇಕು ಎಂದು ಪೀಠ ತಿಳಿಸಿತು. ಅಲ್ಲದೆ, ಒಂದು ವೇಳೆ ಅರ್ಜಿದಾರರು ದಂಡದ ಮೊತ್ತವನ್ನು ಪಾವತಿ ಮಾಡದಿದ್ದಲ್ಲಿ, ಅವರ ಭೂಕಂದಾಯಕ್ಕೆ ಬಾಕಿ ಮೊತ್ತವನ್ನಾಗಿ ಪರಿಗಣಿಸಿ ವಸೂಲಿ ಮಾಡಬಹುದಾಗಿದೆ ಎಂದು ತಿಳಿಸಿತು.

ಇದಾದ ಬಳಿಕವೂ ಅರ್ಜಿದಾರರು ಮತ್ತೆ ವಾದ ಮುಂದುವರೆಸಿ, ಹಿಂದಿ ಭಾಷೆಯನ್ನು ತೆಗೆದುಹಾಕುಲಾಗುತ್ತದೆ ಎಂದು ಪೀಠಕ್ಕೆ ವಿವರಿಸಿದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ಮೂರು ಸಾಲುಗಳ ಪತ್ರಿಕಾ ವರದಿ ಆಧರಿಸಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಹಿಂದಿ ಭಾಷೆಯನ್ನು ತೆಗೆದುಹಾಕಲಾಗಿದೆ ಎಂಬುದಾಗಿ ಪತ್ರಿಕಾ ವರದಿಯಲ್ಲಿ ತಿಳಿಸಿಲ್ಲ. ಜೊತೆಗೆ, ಸಚಿವರು ಹಿಂದಿ ಭಾಷೆ ತೆಗೆಯಬೇಕು ಎಂದು ಹೇಳಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಅದು ತಪ್ಪಾಗಿದ್ದು, ಅದನ್ನು ಅರ್ಜಿಯಲ್ಲಿ ಸೇರಿಸಲಾಗಿದೆ. ಈ ರೀತಿಯ ಅಂಶ ಪತ್ರಿಕೆಗಳ ವರದಿಯಲ್ಲಿ ಉಲ್ಲೇಖವಾಗಿಲ್ಲ. ಆದ್ದರಿಂದ ದಂಡದ ಮೊತ್ತವನ್ನು 1 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗುತ್ತಿದೆ ಎಂದು ತಿಳಿಸಿ, ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿತು.

ಅರ್ಜಿ ವಿವರ: ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ, ಹಿಂದಿ ಭಾಷೆ ಸೇರಿದಂತೆ ತೃತೀಯ ಭಾಷೆಗಳು ಕಡ್ಡಾಯವಲ್ಲ. ಈ ಭಾಷೆಗಳಿಗೆ ಅಂಕಗಳ ಬದಲಿಗೆ ಗ್ರೇಡ್‌ಗಳನ್ನಾಗಿ ಪರಿಗಣಿಸಲಾಗುತ್ತದೆ. ಪ್ರಸ್ತುತ ಶೈಕ್ಷಣಿಕ ವರ್ಷದಿಂದಲೇ ದ್ವಿಭಾಷಾ ಸೂತ್ರವನ್ನು ಜಾರಿಗೆ ತರುವುದಾಗಿ ತಿಳಿಸಿದ್ದಾರೆ. ಅಲ್ಲದೆ, ಸಚಿವರು ಈ ನಿರ್ಧಾರವನ್ನು ಪ್ರಕಟಿಸುವುದಕ್ಕೂ ಮುನ್ನ ಸಾರ್ವಜನಿಕವಾಗಿ ಚರ್ಚೆ ನಡೆಸಿಲ್ಲ. ಸಚಿವ ಸಂಪುಟದ ಅನುಮೋದನೆ ಪಡೆದಿಲ್ಲ ಹಾಗೂ ಭಾಷಾ ತಜ್ಞರ ಸಲಹೆ ಇಲ್ಲದೇ ಏಕಪಕ್ಷೀಯವಾಗಿ ತೆಗೆದುಕೊಂಡಿದ್ದಾರೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಅಂದರೆ ಮಾರ್ಚ್ 31ರಂದು ಈ ರೀತಿಯ ಹೇಳಿಕೆ ಹೊರಬಿದ್ದಿರುವುದರಿಂದ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿದ್ದಾರೆ. ಆದರೆ, ಈವರೆಗೂ ಈ ಕುರಿತಂತೆ ಯಾವುದೇ ಅಧಿಕೃತ ಸರ್ಕಾರಿ ಆದೇಶ ಅಥವಾ ಅಧಿಸೂಚನೆ ಹೊರಬಂದಿಲ್ಲ. ಸಚಿವರ ಈ ನಿರ್ಧಾರಕ್ಕಾಗಿ ಸಾರ್ವಜನಿಕರಿಂದ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಅಲ್ಲದೆ, ಸಚಿವರ ಈ ನಿರ್ಧಾರ ಸಂವಿಧಾನದ ಪರಿಚ್ಛೇದ 14ರಡಿ ಸಮಾನತೆ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ಉಲ್ಲೇಖಿಸಲಾಗಿದೆ.

## ದಾವಣಗೆರೆಯಲ್ಲಿ ಕಾಂಗ್ರೆಸ್ ಸೋಲಿಸಲು ನಮ್ಮ ಪಕ್ಷದ ಮುಖಂಡರಿಂದ ಷಡ್ಯಂತ್ರ



**ಬೆಂಗಳೂರು,ಏ.10**-ದಾವಣಗೆರೆ ಉಪ ಚುನಾವಣೆಯ ಪ್ರಚಾರಕ್ಕೆ ಬರದೇ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ನಮ್ಮ ಪಕ್ಷದ ಮುಖಂಡರು ಷಡ್ಯಂತ್ರ ಮಾಡಿದ್ದರು. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಿಗೆ ಮಾಹಿತಿ ನೀಡಲಾಗಿದೆ. ಷಡ್ಯಂತ್ರದ ನಡುವೆಯೂ ಅಲ್ಪಸಂಖ್ಯಾತ ಮತದಾರರು ಕಾಂಗ್ರೆಸ್‌ಗೆ ಮತ ಚಲಾಯಿಸುವ ಮೂಲಕ ಗೆಲುವಿಗೆ ನಾಂದಿ ಹಾಡಲಿದ್ದಾರೆ ಎಂದು ವಿಧಾನ ಪರಿಷತ್ ಸಚೇತಕ ಸಲೀಂ ಅಹಮ್ಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ ಹೇಳಿದ್ದಾರೆ.

ಬಾಗಲಕೋಟೆ ಹಾಗೂ ದಾವಣಗೆರೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ಮುಖ್ಯವಾಗಿ ದಾವಣಗೆರೆಯಲ್ಲಿ ತಮಗೆ ವಹಿಸಿದ್ದ ಚುನಾವಣಾ ಜವಾಬ್ದಾರಿಯನ್ನು ಸೂಸೂತ್ರವಾಗಿ ನಿಭಾಯಿಸಿದ್ದೇವೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥಗೆ ಟಿಕೆಟ್ ನೀಡುವ ಬಗ್ಗೆ ಅಲ್ಪಸಂಖ್ಯಾತ ನಾಯಕರ ಸಭೆ ನಡೆಸಿ ಒಪ್ಪಿಗೆ ಪಡೆದರೂ ಹೊರಬಂದು ಕಾಂಗ್ರೆಸ್ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದರು. ಚುನಾವಣೆ ಪ್ರಚಾರಕ್ಕೆ ಬರದೇ, ಕಾಂಗ್ರೆಸ್ ಸೋಲಿಸುವ ಷಡ್ಯಂತ್ರ ರೂಪಿಸಿದ್ದರು ಎಂದು ಸ್ವಪಕ್ಷದವರ ವಿರುದ್ಧವೇ ಜಂಟಿ ಮಾಧ್ಯಮಗೋಷ್ಠಿ ನಡೆಸಿ ಇಬ್ಬರೂ ಕಿಡಿಕಾರಿದರು.

ಶಾಸಕ ರಿಜ್ವಾನ್ ಅರ್ಷದ್ ಅವರು ಮಾತನಾಡಿ, ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಎಲ್ಲಾ ಜಾತಿ, ಧರ್ಮ, ಸಮುದಾಯಗಳ ಜನ ಒಕ್ಕೊರಲಿನಿಂದ ಬೆಂಬಲಿಸಿದ್ದಾರೆ. ಅಲ್ಪಸಂಖ್ಯಾತರಿಗೆ ದ್ರೋಹವಾಗಿದೆ ಎಂದು ಸಾಮಾಜಿಕ ಜಾಲತಾಣಗಳ ಮುಖಾಂತರ ವಿರೋಧ ಪಕ್ಷಗಳು ಕೂಗೆಬ್ಬಿಸಿದವು. ಅಲ್ಪಸಂಖ್ಯಾತ ಸಮುದಾಯ ಎಷ್ಟೇ ಕೇಳಿದರೂ ಟಿಕೆಟ್ ನೀಡಿಲ್ಲ, ಕಡೆಗಣಿಸಲಾಗಿದೆ ಎಂದು ಬಿಜೆಪಿ, ಎಸ್‌ಡಿಪಿಐ, ಪಕ್ಷೇತರ ಅಭ್ಯರ್ಥಿಗಳು ಆರೋಪಿಸಿದ್ದರು. ನಾವೆಲ್ಲರೂ ಸೇರಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂದು ಬೇಡಿಕೆ ಇಟ್ಟಿದ್ದು ನಿಜ. ಪಕ್ಷವೂ ಸಹ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂದು ಮನ್ನಿಸಿದ್ದೂ ನಿಜ. ಆದರೆ ನಾವೆಲ್ಲರೂ ಸೇರಿ ಒಮ್ಮತದ ಅಭ್ಯರ್ಥಿಯನ್ನು ನೀಡಬೇಕಿತ್ತು ಎಂದರು. ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರು ನಾನೇ ಸೂಕ್ತ ಅಭ್ಯರ್ಥಿ ಎಂದು ಒತ್ತಡ ಹಾಕಿದ್ದರು. ಈ ಕುರಿತು ಅಲ್ಪಸಂಖ್ಯಾತ ಶಾಸಕರು, ಸಚಿವರು ಮೂರು ನಾಲ್ಕು ಬಾರಿ ಸಭೆ ಸೇರಿದ್ದೆವು. ಅಲ್ಲಿ ಜಮೀರ್ ಅಹಮದ್, ಹ್ಯಾರಿಸ್, ತನ್ವೀರ್ ಸೇಠ್, ನಸೀರ್ ಅಹಮದ್, ರಹೀಂಖಾನ್ ಸೇರಿದಂತೆ ಪ್ರಮುಖರೆಲ್ಲರೂ ಇದ್ದರು. ನಾವೆಲ್ಲರೂ ಸೇರಿ ಅಬ್ದುಲ್ ಜಬ್ಬಾರ್ ಅವರಿಗೆ ನೀಡುವುದು ಎಂದು ತೀರ್ಮಾನ ಮಾಡಿದೆವು. ಆದರೆ ತಳ ಮಟ್ಟದ ಕಾರ್ಯಕರ್ತರು, ಕೆಲ ಮುಖಂಡರು ಅವರಿಗೆ ಜನಪ್ರಿಯತೆ ಇಲ್ಲ್. ಜೊತೆಗೆ ಸ್ಥಾನ ಗೆಲ್ಲಲು ಆಗುವುದಿಲ್ಲ ಎಂಬ ಅಭಿಪ್ರಾಯ ಬಂದಿತ್ತು. ಆದರೂ ನಾವು ಕೊನೆವರೆಗೂ ಅವರ ಹೆಸರನ್ನೇ ಹೇಳಿದ ಕಾರಣಕ್ಕೆ ನಮಗೆ ಹಿನ್ನಡೆ ಉಂಟಾಯಿತು. ನಾವು ನಾಲ್ಕೈದು ಜನರ ಹೆಸರನ್ನು ಸೂಚಿಸಬೇಕಾಗಿತ್ತ್. ಅಥವಾ ಎಸ್.ಎಸ್.ಮಲ್ಲಿಕಾರ್ಜುನ ಅವರಿಗೆ ನೀವೇ ಮುಸ್ಲಿಂ ಅಭ್ಯರ್ಥಿ ಹೆಸರನ್ನು ಸೂಚಿಸಿ, ನಾವೆಲ್ಲರೂ ಸೇರಿ ಕೆಲಸ ಮಾಡುತ್ತೇವೆ ಎಂದು ಹೇಳಬೇಕಿತ್ತು. ಇದನ್ನು ಮಾಡದೇ ಇದ್ದ ಕಾರಣಕ್ಕೆ ನಾವು ಎಡವಿದೆವು ಎಂದು ಹೇಳಿದರು.

ಅಲ್ಪಸಂಖ್ಯಾತ ಶಾಸಕರು ದಾವಣಗೆರೆಗೆ ತೆರಳಿ ಕೆಲಸ ಮಾಡಿದ್ದಾರೆ: ರಂಜಾನ್ ಹಬ್ಬದ ದಿನದಂದು ರಣದೀಪ್ ಸಿಂಗ್ ಸುರ್ಜೆವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒಳಗೊಂಡ ಸಭೆಯನ್ನು ಕರೆಯಲಾಗಿತ್ತು. ಜವಾಬ್ದಾರಿ ನೀಡಿದ ಮೇಲೆ ಪ್ರತಿಯೊಬ್ಬ ಅಲ್ಪಸಂಖ್ಯಾತ ಶಾಸಕರು ದಾವಣಗೆರೆಗೆ ತೆರಳಿ ಕೆಲಸ ಮಾಡಿದ್ದಾರೆ. ಸಮುದಾಯದ ದ್ರೋಹಿಗಳು ಎಂದು ಸಾಮಾಜಿಕ ಜಾಲತಾಣದಲ್ಲಿ ಹೇಳುವುದು ಸರಿಯಲ್ಲ. ಒಳಗಡೆ ಒಪ್ಪಿಕೊಂಡು ಹೊರಗಡೆ ವಿರೋಧ ಮಾಡುವುದು ಸರಿಯಲ್ಲ. ಹೀಗಿದ್ದರೆ ಮೊದಲೇ ಒಪ್ಪಿಕೊಳ್ಳಬಾರದಿತ್ತು. ಪಕ್ಷದ ಪರವಾಗಿ ಕೆಲಸ ಮಾಡುತ್ತೇವೆ ಎಂದು ಒಂದೇ ಟೇಬಲ್‌ನಲ್ಲಿ ಕುಳಿತು ಒಪ್ಪಿಕೊಂಡಿರುವುದು ಸ್ಪಷ್ಟವಾಗಿದೆ ಎಂದರು.

## ಪಶ್ಚಿಮ ಬಂಗಾಳ: ಮಹಿಳೆಯರಿಗೆ 3,000 ರೂ. ಆರ್ಥಿಕ ನೆರವು

### 1 ಕೋಟಿ ಉದ್ಯೋಗ, ಬಿಜೆಪಿ ಚುನಾವಣಾ ಪ್ರಣಾಳಿಕೆ ಬಿಡುಗಡೆ



**ಕೋಲ್ಕತ್ತಾ,ಏ.10**- 2026ರ ಪಶ್ಚಿಮ ಬಂಗಾಳ ವಿಧಾನ ಸಭೆ ಚುನಾವಣೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಕೋಲ್ಕತ್ತಾದಲ್ಲಿ ಬಿಜೆಪಿ ಸಂಕಲ್ಪ ಪತ್ರ (ಪ್ರಣಾಳಿಕೆ)ಯನ್ನು ಬಿಡುಗಡೆ ಮಾಡಿದರು. ಪ್ರಧಾನಿ ನರೇಂದ್ರ ಮೋದಿಯವರ ವಿಕಸಿತ ಭಾರತ ದೃಷ್ಟಿಗೆ ಅನುಗುಣವಾಗಿ ರಾಜ್ಯವನ್ನು ಹತಾಶೆಯಿಂದ ಅಭಿವೃದ್ಧಿಗೆ ಪರಿವರ್ತಿಸುವ ಗುರಿ ಹೊಂದಲಾಗಿದೆ.

ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ನಂತರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅಮಿತ್ ಶಾ, ಆಡಳಿತಾರೂಢ TMC ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ರಾಜ್ಯದ ಜನರಲ್ಲಿ ಅಸಮಾಧಾನ ಹೆಚ್ಚಾಗಿದ್ದು, ಬದಲಾವಣೆಯನ್ನು ಬಯಸುತ್ತಿದ್ದಾರೆ. ರೈತರು, ಯುವಕರು ಮತ್ತು ಮಹಿಳೆಯರು ಸೇರಿದಂತೆ ಸಮಾಜದ ವಿವಿಧ ವರ್ಗಗಳು ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಲು ಬಿಜೆಪಿಯ ಪ್ರಣಾಳಿಕೆಯು ಸಮಗ್ರ ನೀಲನಕ್ಷೆಯಾಗಿದೆ ಎಂದು ಅವರು ಹೇಳಿದರು.

ಇಂದು ಬಿಜೆಪಿ 2026 ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಈ ಪ್ರಣಾಳಿಕೆ ಬಂಗಾಳದ ಎಲ್ಲಾ ವಲಯಗಳಲ್ಲಿರುವ ಹತಾಶೆಯನ್ನು ಹೋಗಲಾಡಿಸಲು ಮಾರ್ಗವನ್ನು ಒದಗಿಸುತ್ತದೆ. ಬೆಳೆ ನಷ್ಟದಿಂದ ಅನಿಶ್ಚಿತತೆಯನ್ನು ಎದುರಿಸುತ್ತಿರುವ ರೈತರಿಗೆ, ನಿರುದ್ಯೋಗಿ ಯುವಕರಿಗೆ ಮತ್ತು ಭಯದಿಂದ ಬದುಕುತ್ತಿರುವ ಮಹಿಳೆಯರಿಗೆ ಇದು ಹೊಸ ದಿಕ್ಕನ್ನು ನೀಡುತ್ತದೆ.

ಇದು ಬಂಗಾಳದ ಸಂಸ್ಕೃತಿ ಮತ್ತು ಅದರ ಹೆಮ್ಮೆಯ ಬಗ್ಗೆ ಕಾಳಜಿವಹಿಸುವ ಪ್ರತಿಯೊಬ್ಬ ನಾಗರಿಕರಿಗೂ ಹೊಸ ಭರವಸೆ ಮತ್ತು ವಿಶ್ವಾಸವನ್ನು ನೀಡುತ್ತದೆ ಎಂದರು.

ಸೋನಾರ್ ಬಾಂಗ್ಲಾ (ಗೋಲ್ಡನ್ ಬೆಂಗಾಲ್) ವಿಷಯದ ಪ್ರಣಾಳಿಕೆಯು ಆಡಳಿತ ಸುಧಾರಣೆಗಳು, ಆರ್ಥಿಕ ಬೆಳವಣಿಗೆ, ರಾಷ್ಟ್ರೀಯ ಭದ್ರತೆ ಮತ್ತು ಸಾಮಾಜಿಕ ಕಲ್ಯಾಣದ ಮೇಲೆ ಕೇಂದ್ರೀಕೃತವಾಗಿರುವ 15 ಪ್ರಮುಖ ಬದ್ಧತೆಗಳನ್ನು ವಿವರಿಸುತ್ತದೆ. ಅಕ್ರಮ ನುಸುಳುಕೋರರನ್ನು ದೇಶದಿಂದ ಓಡಿಸಲು ಗಡೀಪಾರು ನೀತಿಯನ್ನು ಭರವಸೆ ನೀಡುತ್ತದೆ. ಟಿಎಂಸಿ ಅಧಿಕಾರಾವಧಿಯಲ್ಲಿನ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯಗಳನ್ನು ವಿವರಿಸುವ ಶ್ವೇತಪತ್ರವನ್ನು ಬಿಡುಗಡೆ ಮಾಡುವುದಾಗಿ ಬಿಜೆಪಿ ಹೇಳಿದೆ.

ಉದ್ಯೋಗ: ಪಕ್ಷವು ಐದು ವರ್ಷಗಳಲ್ಲಿ ಒಂದು ಕೋಟಿ ಉದ್ಯೋಗಗಳು ಮತ್ತು ಸ್ವಯಂ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ವಾಗ್ದಾನ ಮಾಡಿದೆ.

ನಿರುದ್ಯೋಗಿ ಯುವಕ/ ಯುವತಿಯರಿಗೆ 10,000 ರೂಪಾಯಿಗಳ ಆರ್ಥಿಕ ನೆರವು ನೀಡುವುದಾಗಿಯೂ ಪ್ರಸ್ತಾಪಿಸಿದೆ. ಸರ್ಕಾರಿ ನೌಕರರಿಗೆ ಬಾಕಿ ವೇತನವನ್ನು ಪಾವತಿಸಲಾಗುವುದು, 7ನೇ ವೇತನ ಆಯೋಗ ಅನುಷ್ಠಾನ ಮಾಡಲಾಗುವುದು. ಸಿಂಡಿಕೇಟ್ ಸಂಸ್ಕೃತಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಲಾಗಿದೆ.

**ಮಹಿಳೆಯರಿಗೆ ತಿಂಗಳಿಗೆ 3,000 ರೂ.ಆರ್ಥಿಕ ನೆರವು:** ಮಹಿಳಾ ಸುರಕ್ಷತೆ ಮತ್ತು ಸಬಲೀಕರಣದ ಗುರಿ ಹೊಂದಿರುವ ಬಿಜೆಪಿಯು ಮಹಿಳಾ ಪೊಲೀಸ್ ಬೆಟಾಲಿಯನ್‌ಗಳ ರಚನೆ, ದುರ್ಗಾ ಸುರಕ್ಷಾ ಸಹಾಯ ಯೋಜನೆಯ ಅನುಷ್ಠಾನ ಮತ್ತು ರಾಜ್ಯ ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಸೇರಿದಂತೆ ಹಲವಾರು ಕ್ರಮಗಳನ್ನು ವಿವರಿಸಿದೆ. ಅಲ್ಲದೇ ಪಕ್ಷವು ಮಹಿಳಾ ಫಲಾನುಭವಿಗಳಿಗೆ ಮಾಸಿಕ 3,000 ರೂ. ಆರ್ಥಿಕ ನೆರವಿನ ಭರವಸೆ ನೀಡಿದೆ.

ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಮೀನುಗಾರಿಕಾ ವಲಯವನ್ನು ಉತ್ತೇಜಿಸುವ ಭರವಸೆಯನ್ನು ನೀಡುವುದರೊಂದಿಗೆ ಪ್ರಮುಖ ಬೆಳೆಗಳಾದ ಅಕ್ಕಿ, ಆಲೂಗಡ್ಡೆ ಮತ್ತು ಮಾವಿಗೆ ಬೆಂಬಲ ಬೆಲೆಯ ವಾಗ್ದಾನ ಮಾಡಿದೆ.

ಕೈಗಾರಿಕಾ ಅಭಿವೃದ್ಧಿ ಯೋಜನೆಗಳಲ್ಲಿ ಚಹಾ ತೋಟಗಳನ್ನು ಪುನರುಜ್ಜೀವನಗೊಳಿಸುವುದು, ಡಾರ್ಜಿಲಿಂಗ್ ಚಹಾ ಬ್ರಾಂಡ್ ಅನ್ನು ಬಲಪಡಿಸುವುದು ಮತ್ತು ಸೆಣಬು ಉದ್ಯಮವನ್ನು ಆಧುನೀಕರಿಸುವುದು ಸೇರಿದೆ.

ಪಶ್ಚಿಮ ಬಂಗಾಳ ಚುನಾವಣೆ: ಬಿಜೆಪಿ ಗೆದ್ದರೆ ಆರು ಗ್ಯಾರಂಟಿಗಳ ಜಾರಿಗೆ ಪ್ರಧಾನಿ ಮೋದಿ ವಾಗ್ದಾನ; ಟಿಎಂಸಿ ಕಿತ್ತೊಗೆಯಲು ಮತದಾರರಿಗೆ ಕರೆ! ಆಯುಷ್ಮಾನ್ ಭಾರತ್ ನಂತಹ ಕೇಂದ್ರೀಯ ಯೋಜನೆ ಗಳನ್ನು ಜಾರಿಗೆ ತರಲಾಗುವುದು, ಉತ್ತರ ಬಂಗಾಳದಲ್ಲಿ AIIMS, IIT ಮತ್ತು IIM ನಂತಹ ಪ್ರಧಾನ ಸಂಸ್ಥೆಗಳನ್ನು ವಿಸ್ತರಿಸಲಾಗುವುದು

ಮತ್ತು ಉಚಿತ HPV ಲಸಿಕೆ ಮತ್ತು ಸ್ತನ ಕ್ಯಾನ್ಸರ್ ಸ್ಕ್ರೀನಿಂಗ್ ನಂತಹ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದು ಹೇಳಿದೆ.

## ಜಾಲತಾಣದಲ್ಲಿ ಮಹಿಳೆಯ ಅನಾರೋಗ್ಯದ ವಿಡಿಯೋ ನೋಡಿ ಮನೆಗೆ ಬಂದು ನೆರವು ನೀಡಿದ ಕೇಂದ್ರ ಸಚಿವ ಕುಮಾರಸ್ವಾಮಿ

**ಮೈಸೂರು,ಏ.10**-ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಮಹಿಳೆಯ ಸ್ಥಿತಿಯನ್ನು ಸಾಮಾಜಿಕ ಜಾಲತಾಣದಲ್ಲಿ ತಿಳಿದ ಕೇಂದ್ರ ಸಚಿವ ಹೆಚ್. ಡಿ ಕುಮಾರಸ್ವಾಮಿ ಅವರು ಮಹಿಳೆ ಮನೆಗೆ ಭೇಟಿ ನೀಡಿ, ಅವರಿಗೆ ಧೈರ್ಯ ಹಾಗೂ ನೆರವನ್ನು ನೀಡಿದ್ದಾರೆ.

ನಿನ್ನೆಯಿಂದ ಎರಡು ದಿನಗಳ ಕಾಲ ಮೈಸೂರು ಜಿಲ್ಲೆಯ ಪ್ರವಾಸದಲ್ಲಿದ್ದ ಸಚಿವರು ಇಂದು ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಹಾಗೂ ನಂಜನಗೂಡಿನ ನಂಜುಂಡೇಶ್ವರ ಸ್ವಾಮಿಯ ದರ್ಶನ ಪಡೆದಿದ್ದಾರೆ. ನಂತರ ಅನಾರೋಗ್ಯ ಪೀಡಿತ ಮಹಿಳೆಯ ಮನೆಗೆ ಭೇಟಿ ನೀಡಿದ್ದಾರೆ.

ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಶ್ರೀಮತಿ ಪೂಜಾ (24) ಅವರು ಬೆನ್ನು ನೋವು ಸಮಸ್ಯೆಯಿಂದಾಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದರು. ಆದರೆ, ಚಿಕಿತ್ಸೆಯ ನಂತರ ಅಡ್ಡ



ಪರಿಣಾಮ ಉಂಟಾಗಿ ಎರಡು ಕಾಲುಗಳು ಶಕ್ತಿ ಕಳೆದುಕೊಂಡಿದ್ದವು. ಇದಾದ ನಂತರ ಅವರ ಕಾಲಿಗೆ ಆಪರೇಷನ್ ಮಾಡಿದರೂ ಶಕ್ತಿ ಬಂದಿಲ್ಲ. ಹೀಗಾಗಿ, ಗ್ರಾಮದಲ್ಲಿದ್ದ ತಂದೆಯ ಮನೆ ಹಾಗೂ ಜಮೀನನ್ನ ಮಾರಿ ಚಿಕಿತ್ಸೆ ಕೊಡಿಸಿದ್ದಾರೆ. ಇದಾದ ನಂತರವೂ ಅವರ ಆರೋಗ್ಯ ಸರಿಯಾಗದೇ ಹಾಸಿಗೆ ಹಿಡಿದಿದ್ದಾರೆ.

ಮತ್ತೊಂದು ಕಡೆ ಮಹಿಳೆಯ ಗಂಡ ರವಿ ಅವರೂ ಕೆಎಸ್‌ಆರ್ಟಿಸಿ ಬಸ್ ಅಪಘಾತದಲ್ಲಿ ಗಾಯಗೊಂಡು ಅವರೂ ಹಾಸಿಗೆ ಹಿಡಿದಿದ್ದಾರೆ. ಅವರೂ ದುಡಿಯುವ ಶಕ್ತಿಯನ್ನ ಕಳೆದುಕೊಂಡಿದ್ದಾರೆ. ಈ ಮಧ್ಯೆ ಬಾಡಿಗೆ ಮನೆಯಲ್ಲಿ ವಾಸವಿರುವ ಈ ಕುಟುಂಬಕ್ಕೆ ಬಾಡಿಗೆ ಕಟ್ಟಲು ಕಷ್ಟವಾಗಿದೆ. ಹೀಗಾಗಿ, ಮನೆಯ ಮಾಲೀಕ ಮನೆ ಖಾಲಿ ಮಾಡಿ ಎಂದು ಹೇಳಿದ್ದಾರೆ. ಹೀಗಾಗಿ, ಈ ಬಗ್ಗೆ ನೊಂದ ಕುಟುಂಬ ಮನೆಗೆ ಬಂದಿದ್ದ ಸಚಿವರ ಗಮನಕ್ಕೆ ತಂದಿದ್ದಾರೆ. ಅವರೀಗ ಕೂಡಲೇ ಆರ್ಥಿಕ ನೆರವು ಹಾಗೂ ಮನೆ ಕೊಡಿಸುವ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದಾರೆ. ಈ ಕುಟುಂಬದ ಸ್ಥಿತಿಯ ಬಗ್ಗೆ ಜಾಲತಾಣದಲ್ಲಿ ವಿಡಿಯೋ ಮಾಡಿ ಶೇರ್ ಮಾಡಿದ್ದ ಗ್ರಾಮದ ಯುವಕ ಚೇತನ್ ಅವರನ್ನ ಕರೆದು ಕೇಂದ್ರ ಸಚಿವರು ಅಭಿನಂದನೆ ಸಲ್ಲಿಸಿದ್ದಾರೆ.

ಬಳಿಕ ಕಷ್ಟದಲ್ಲಿರುವ ಕುಟುಂಬಕ್ಕೆ ಧನ ಸಹಾಯ ಹಾಗೂ ಮನೆ ಕೊಡಿಸುವ ಜೊತೆಗೆ ಆ ಕುಟುಂಬದ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವ ಬಗ್ಗೆಯೂ ಸ್ಥಳದಲ್ಲೇ ಭರವಸೆ ನೀಡಿ, ಸ್ಥಳೀಯ ಜೆಡಿಎಸ್ ಶಾಸಕರು ಹಾಗೂ ಮುಖಂಡರಿಗೆ ಆ ಜವಾಬ್ದಾರಿಯನ್ನ

ವಹಿಸಿದ್ದಾರೆ. ಹೀಗೆ ಜಾಲತಾಣದಲ್ಲಿ ಶೇರ್ ಆಗಿದ್ದ ಪೂಜಾ ಅವರ ಅನಾರೋಗ್ಯದ ವಿಡಿಯೋ ಈಗ ಕೇಂದ್ರ ಸಚಿವರ ಗಮನ ಸೆಳೆದು ಅವರ ಸಹಾಯಕ್ಕೆ ಬಂದಿದ್ದಾರೆ. ಜಾಲತಾಣದ ಶಕ್ತಿಗೆ ಈ ಘಟನೆ ನಿದರ್ಶನವಾಗಿದೆ.

## ಹುಲಿಕಲ್ ಘಾಟ್ ಕುಸಿತ: ಮೃತರ ಕುಟುಂಬಗಳಿಗೆ ಸರ್ಕಾರದಿಂದ ತಲಾ ₹5 ಲಕ್ಷ ಪರಿಹಾರ ಘೋಷಣೆ



**ಶಿವಮೊಗ್ಗ,ಏ.10**- ಜಿಲ್ಲೆಯ ಹೊಸನಗರ ತಾಲೂಕಿನ ಹುಲಿಕಲ್ ಘಾಟ್‌ನಲ್ಲಿ ಗುರುವಾರ ತಡೆಗೋಡೆ ಕಾಮಗಾರಿ ವೇಳೆ ಮಣ್ಣು ಕುಸಿದು ಮೂವರು ಮೃತಪಟ್ಟು, ಇಬ್ಬರಿಗೆ ಗಂಭೀರ ಗಾಯವಾಗಿತ್ತು. ಮೃತರ ಕುಟುಂಬಗಳಿಗೆ ಇಂದು ರಾಜ್ಯ ಸರ್ಕಾರ ತಲಾ 5 ಲಕ್ಷ ರೂ ಪರಿಹಾರ ಘೋಷಿಸಿದೆ.

ಶಿವಮೊಗ್ಗ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಅವರು ಇಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ, ನಿನ್ನೆ ಸಂಜೆ ನಡೆದ ಮಣ್ಣು ಕುಸಿತದಲ್ಲಿ ಮಣ್ಣಿನಡಿ ಸಿಲುಕಿ ಮೂವರು ಸಾವನ್ನಪ್ಪಿರುವ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪನವರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ ತಂದಿದ್ದರು. ಸಿಎಂ ಮೃತರ ಕುಟುಂಬದವರಿಗೆ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ.

ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ದೊರಕುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿರುವುದಾಗಿ ಹೇಳಿದ್ದಾರೆ ಎಂದರು. ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ಸ್ಥಳದಲ್ಲಿದ್ದರು. ಘಟನೆಯಲ್ಲಿ ರಾಘವೇಂದ್ರ (37), ರಾಜು (30) ಹಾಗೂ ಶರ್ಬ್ಬಿ (30) ಮೃತರಾಗಿದ್ದಾರೆ. ರಾಘವೇಂದ್ರ ಮೇಸ್ತ್ರಿ ಕೆಲಸ ಮಾಡುತ್ತಿದ್ದರು. ಇವರಿಗೆ ಕಳೆದ ಹತ್ತು ದಿನಗಳ ಹಿಂದಷ್ಟೆ ಮಗು ಜನಿಸಿತ್ತು. ಹುಲಿಕಲ್ ಘಾಟ್‌ನ ತಡೆಗೋಡೆ ಕಾಮಗಾರಿಯನ್ನು ಚಂದ್ರಶೇಖರ್ ಎಂಬ ಗುತ್ತಿಗೆದಾರರು ಗುತ್ತಿಗೆ ನಡೆಸುತ್ತಿದ್ದರು.

ಅವಘಡ ಸಂಭವಿಸಿದ್ದು ಹೀಗೆ: ಹುಲಿಕಲ್ ಘಾಟ್‌ನ ಶ್ರೀ ಚಂಡಿಕಾ ಪರಮೇಶ್ವರಿ ದೇವಾಲಯದ ಹಂಬದಿಯ ಹೇರ್ ಪಿನ್ ತಿರುವಿನಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದ ಮಣ್ಣು ಕುಸಿದಿತ್ತು. ಇದರ ಕಾಮಗಾರಿ ನಡೆಸುವಾಗ ದಿಢೀರ್ ಮಣ್ಣು ಕುಸಿದು ಸಾವು-ನೋವು ಸಂಭವಿಸಿದೆ.

## ಆಟೋ ಗ್ಯಾಸ್ ಪೂರೈಕೆ ಸಮಸ್ಯೆ ಪರಿಹರಿಸುವಂತೆ ಕೇಂದ್ರಕ್ಕೆ ಸಚಿವ ಮುನಿಯಪ್ಪ ಆಗ್ರಹ




**ಬೆಂಗಳೂರು,ಏ.10**-ಸಂಕಷ್ಟದಲ್ಲಿರುವ ಆಟೋ ಚಾಲಕರ ರಕ್ಷಣೆ ವಿಚಾರದಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದ ಸಚಿವ ಕೆ.ಎಚ್. ಮುನಿಯಪ್ಪ ಅವರು, ತಕ್ಷಣವೇ ಆಟೋ ಗ್ಯಾಸ್ ಪೂರೈಕೆ ಸಮಸ್ಯೆ ಪರಿಹರಿಸುವಂತೆ ಶುಕ್ರವಾರ ಆಗ್ರಹಿ ಸಿದರು.

ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ನಂತರ ಆಟೋ ಗ್ಯಾಸ್ ಪೂರೈಕೆ ಸಮಸ್ಯೆಗೆ ಸಂಬಂಧಿ ಸಿದಂತೆ ಸಚಿವರು ಇಂದು ಹಿರಿಯ ಅಧಿಕಾರಿಗಳು ಮತ್ತು ಸರ್ಕಾರಿ ತೈಲ ಹಾಗೂ ಅನಿಲ ಕಂಪನಿಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು.

ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾ ಡಿದ ಸಚಿವರು, ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಸುಧಾರಣೆ ಆಗಿದೆ. ಆದರೆ ಆಟೋ ಗ್ಯಾಸ್ ಪೂರೈಕೆಯಲ್ಲಿ ಯಾವುದೇ ಸುಧಾರಣೆ ಆಗಿಲ್ಲ ಎಂದರು.

ಬೆಂಗಳೂರು ಮತ್ತು ರಾಜ್ಯದ ಇತರ ಹಲವಾರು ಸ್ಥಳಗಳಲ್ಲಿ ಆಟೋ ಎಲ್‌ಪಿಜಿ ಕೊರತೆಯಿಂದಾಗಿ ಆಟೋ ಸೇವೆಗಳಲ್ಲಿ ಅಡಚಣೆಗಳು ಕಂಡುಬರುತ್ತಿವೆ. ಅನೇಕ ಪ್ರದೇಶಗಳಲ್ಲಿ ಬಂಕ್ ಹೊರಗೆ ಆಟೋಗಳ ಕಿಲೋ ಮೀಟರ್ ಗಟ್ಟಲೇ ಕ್ಯೂ ನಿಂತಿರುವ ದೃಶ್ಯ ಕಂಡುಬಂದಿದ್ದು, ಚಾಲಕರು ಗ್ಯಾಸ್ ಗಾಗಿ ಗಂಟೆಗಟ್ಟಲೆ ಕಾಯುತ್ತಿದ್ದಾರೆ ಎಂದರು.


ರಾಜ್ಯದಲ್ಲಿರುವ ಸುಮಾರು ಐದು ಲಕ್ಷ ಆಟೋಗಳಲ್ಲಿ ಮೂರು ಲಕ್ಷ ಆಟೋ ಗ್ಯಾಸ್ ಅನ್ನು ಅವಲಂಬಿಸಿವೆ. ಇವುಗಳಲ್ಲಿ 1.6 ಲಕ್ಷ ಬೆಂಗಳೂರಿನಲ್ಲಿದ್ದು, ಅವರು ತೀವ್ರ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಚಾಲಕರ ಜೀವನೋಪಾಯವು ಆಟೋಗಳ ಮೇಲೆ ಅವಲಂಬಿತವಾಗಿರುವುದರಿಂದ ಈ ಸಮಸ್ಯೆಯನ್ನು ಪರಿಹರಿಸಲು ನಾವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಪರಿಹಾರವನ್ನು ಕಂಡುಕೊಳ್ಳಬೇಕೆಂದು ನಾನು ಕೇಂದ್ರವನ್ನು ಒತ್ತಾಯಿಸುತ್ತೇನೆ, ಎಂದು ಅವರು ಹೇಳಿದರು

ಆಟೋಚಾಲಕರಿಗೆ ಸಹಾಯ ಮಾಡುವ ವಿಚಾರದ ಬಗ್ಗೆ ಚರ್ಚೆ ಮಾಡಲಾಗುತ್ತಿದೆ.

ಆಟೋಗ್ಯಾಸ್ ಗೆ ಪರಿಹಾರ ನೀಡುವಂತೆ ಕೇಂದ್ರಕ್ಕೆ ಒತ್ತಾಯಿಸುತ್ತೇವೆ. ಕೇಂದ್ರ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಂಡು ಸಮಸ್ಯೆ ಬಗೆಹರಿಸಬೇಕು ಎಂದು ಸಚಿವ ಮುನಿಯಪ್ಪ ಹೇಳಿದರು.

# ಬ್ರಿಟಿಷರು ನೀಡಿರುವ ಇತಿಹಾಸಗಳನ್ನು ನಾವು ಮರು ಪರಿಶೀಲಿಸಬೇಕಾಗಿದೆ - ಡಾ. ಶಿವಾನಂದ ಕೆಳಗಿನಮನಿ

ಕನ್ನಡ ಮಾತೃ ಭೂಮಿ ವಾರ್ತೆ



**ಲಿಂಗಸಗೂರ,ಏ.10-** ಮೌಢ್ಯಗಳಿಂದ ತುಂಬಿರುವ ದೇಶ ಭಾರತವಾಗಿದ್ದು ಅದಕ್ಕೆಚರಿತ್ರೆಯೇ ಇಲ್ಲ ಎನ್ನುವ ರೀತಿಯಲ್ಲಿ ಬ್ರಿಟಿಷರು ಇತಿಹಾಸವನ್ನು ದಾಖಲಿಸುತ್ತಾ ಬಂದರು. ಅವರು ನೀಡಿರುವ ಇತಿಹಾಸಗಳ ಹೇಳಿಕೆ ಗಳನ್ನು ಮತ್ತು ನಮ್ಮ ಚರಿತ್ರೆಗಳನ್ನ ನಾವು ಮರುಪರಿಶೀಲಿಸಬೇಕಾಗಿದೆ. ಎಂದು ರಾಯಚೂರು ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಶಿವಾನಂದ ಕೆಳಗಿನಮನಿ ಹೇಳಿದರು.

ಪಟ್ಟಣದ ಒಳಬಳ್ಳಾರಿ ಚನ್ನಬಸವೇಶ್ವರ ಮಹಾವಿದ್ಯಾಲಯ ಲಿಂಗಸಗೂರು ಹಾಗೂ ಕರ್ನಾಟಕ ರಾಜ್ಯ ಪತ್ರಾಗಾರ ಮತ್ತು ಗ್ಯಾಸೆ ಟಿಯರ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಐತಿಹಾಸಿಕ ದಾಖಲೆಗಳು ಮತ್ತು ಚರಿತ್ರೆಯ ಅವಲೋಕನ ಕುರಿತು ನಡೆದ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದವರು ಬ್ರಿಟಿಷರು ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುವುದಿಲ್ಲ ಅವರು ನಮಗೆ ಕೊಟ್ಟಂತಹ ಆಲೋಚನೆಗಳು, ವಿಚಾರ ಕ್ರಮದ ನಿಯಮಗಳು, ಎಷ್ಟೋ ರೀತಿಯಲ್ಲಿ ನಮಗೆ ಸ್ಥಳೀಯವಾಗಿ ಇರತಕ್ಕಂತಹ ನಮ್ಮಚರಿತ್ರೆ, ಪರಂಪರೆ, ಸಂಸ್ಕೃತಿಗಳನ್ನು ನಮ್ಮದೇ ಜೀವನ ಕ್ರಮದ ಸೃಷ್ಟಿ ಪುರಾಣಗಳನ್ನು ಜಾನಪದ ಲಾವಣಿ ಇತ್ಯಾದಿಗಳನ್ನು ಅವರು ನಿರಾಕರಿಸುತ್ತಾ ಬಂದರು.

ಅದು ಇತಿಹಾಸದ ಭಾಗವೇ ಅಲ್ಲ ಎನ್ನುವ ರೀತಿಯಲ್ಲಿ ಹೇಳುತ್ತಾ ಬಂದಿರುವುದನ್ನು ನಾವು ನೋಡಬಹುದಾಗಿದೆ. ಅವರ ಇಂತಹ ಹಲವಾರು ತಪ್ಪು ಗ್ರಹಿಕೆಗಳನ್ನ ಹೊರ ತರಲು ಬ್ರಿಟಿಷರು ನೇರವಾಗಿ ಆಡಳಿತಕ್ಕೆ ಬರಲಿಲ್ಲ. ಒಳ ಒಪ್ಪಂದದ ಮೂಲಕವಾಗಿ ಅಧಿಕಾರ ನಡೆಸಿದ್ದಾರೆ.

ಎಲ್ಲಾ ಪ್ರಾಂತ್ಯಗಳಿಗಿಂತಲೂ ಹೈದರಾಬಾದ್ ಪ್ರಾಂತ್ಯ ಹಿನ್ನಡೆ ಅನುಭವಿಸಲು ಕಾರಣಗಳೇನು ಇಲ್ಲಿಯ ಸಂಸ್ಥಾನಿಕರು ಮಾಡಿರು ತಕ್ಕಂತ ಆಲೋಚನೆ ಆಚಾರ ವಿಚಾರ ನಿಯಮಗಳು ಯಾವ ರೀತಿಯಾಗಿದ್ದವು ಹೈದರಾಬಾದ್ ಪ್ರಾಂತ್ಯದ ಒಳಗಿನ ಚರಿತ್ರೆ ಮತ್ತು ಇತಿಹಾಸಗಳನ್ನು ನೋಡಿದರೆ ಇಲ್ಲಿ ಆಧ್ಯಾತ್ಮಿಕವಾಗಿರ್ತಕ್ಕಂತ ತತ್ವಪದಕಾರರು ಇತ್ಯಾದಿಗಳಿಂದ ಬಹು ಶ್ರೀಮಂತವಾಗಿದ್ದ ಪ್ರದೇಶವಿದು. ಆದರೆ ಇಲ್ಲಿ ವಸಾಹತುಶಾಹಿಯ ಕಾಲಘಟ್ಟದ ನಿಯಮಗಳಾಗಲಿ ಅಥವಾ ಅಲ್ಲಿರುವ ಬಲಾವಣೆಗಳಾಗಲಿ ಅವುಗಳ ಕೊಡುಗೆಗಳು ಏನಾಗಿದ್ದವು. ಮತ್ತು ಅವುಗಳ ವಿನಾಶಗಳು ಯಾವ ರೀತಿ ಆದವು ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಎಂದು ಅವರು ಹೇಳಿದರು.

ವಿಸಿಬಿ ಸಂಸ್ಥೆಯ ಅಧ್ಯಕ್ಷ ಶಾಸಕ ಹಂಪನಗೌಡ ಬಾದರ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಾ. ಅಮರೇಶ್ ಯತಗಲ್ ಅವರು ದಿಕ್ಸೂಚಿ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಗ್ಯಾಸೆಟಿಯರ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ವೀರಶೆಟ್ಟಿ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಡಾ. ಶಿವಶರಣಪ್ಪ ಗುಳ್ಳೆ, ಡಾ. ಸಿ ಬಿ ಪಾಟೀಲ್, ಡಾ. ಶಿವಶರಣ,ಅರುಣಿ, ಡಾ. ಮೀನಾಕ್ಷಿ ಖಂಡಿಮಠ, ಶ್ರೇಣಿಕ್ ರಾಜ್, ಡಾ. ಚಂದ್ರಶೇಖರ್ ರೆಡ್ಡಿ,ಡಾ. ಸುಜಾತಾ, ಡಾ. ಪದ್ಮರಾಜು ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಐಕ್ಯೂ ಇಂಟರ್ ನ್ಯಾಷನಲ್ ಕಾಲೇಜ್ :ಪಿಯುಸಿ ಜಿಲ್ಲೆಗೆ ದ್ವಿತೀಯ ಸ್ಥಾನ, ತಾಲೂಕಿಗೆ ಪ್ರಥಮ

ಕನ್ನಡ ಮಾತೃ ಭೂಮಿ ವಾರ್ತೆ





**ಸಿಂಧನೂರು,ಏ.10-**ಹೊರವಲಯದ ಐಕ್ಯೂ ಇಂಟರ್ ನ್ಯಾಷನಲ್ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು 2025-26 ನೇ ಸಾಲಿನ ಪಿ.ಯು ಸಿ ಕಾಲೇಜು 99% ರಷ್ಟು ಫಲಿತಾಂಶ ಪಡೆದಿದ್ದು ಮೊದಲ ಬಾರಿಗೆ ರಾಯಚೂರು ಜಿಲ್ಲೆಗೆ ದ್ವಿತೀಯ ಸ್ಥಾನ ತಾಲ್ಲೂಕಿಗೆ ಪ್ರಥಮಗಳಿ ಸಿದ್ದಾರೆ ಎಂದು ಆಡಳಿತ ಮಂಡಳಿಯ ಅಧ್ಯಕ್ಷ ರಾಮಚಂದ್ರ ರಾವ್ ಸುಗುಣ ತಿಳಿಸಿದರು.

ಶಾಲೆಯಲ್ಲಿ ಒಟ್ಟು 99 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 98 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

ಇದರಲ್ಲಿ 15 ವಿದ್ಯಾ ರ್ಥಿಗಳು ಶೇ.95% ರಷ್ಟು ಗಳಿಸಿ 48 ವಿದ್ಯಾರ್ಥಿಗಳು ಶೇ.90 ರಷ್ಟು ಉತ್ತೀ ರ್ಣರಾಗಿದ್ದು ಡಿಸ್ಟಿಂಕ್ಷನ್ ನಲ್ಲಿ 70 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಪ್ರಥಮ ಕ್ಲಾಸ್ ನಲ್ಲಿ 98 ವಿದ್ಯಾರ್ಥಿ ಗಳು ಪಾಸಾಗಿರುತ್ತಾರೆ.

ಚಂದ್ರಶೇಖರ್ ಎಚ್ 600ಕ್ಕೆ 588 ಶೇ98% ರಷ್ಟು ಗಳಿಸಿ ಜಿಲ್ಲೆಗೆ ದ್ವಿತೀಯ ತಾಲ್ಲೂಕಿಗೆ ಪ್ರಥಮ ಸ್ಪಂದನಾ ಹೂಗಾರ 97%, ಬಸವರಾಜ.ಕೆ 97% ಈ ಇಬ್ಬರೂ ದ್ವಿತೀಯ ಸ್ಥಾನ ಗಳಿಸಿದ್ದು ತೃತೀಯಾ ಸ್ಥಾನವನ್ನು ಇಬ್ಬರೂ ವಿದ್ಯಾರ್ಥಿಗಳು 96% ತೇಜಸ್ವಿನಿ, ಚರಣ್.ಕೆ ಕನ್ನಡದಲ್ಲಿ 100 ಕ್ಕೆ 100 ಅಂಕವನ್ನು ಗಳಿಸಿದ್ದಾರೆ.

ಭೌತಶಾಸ್ತ್ರದಲ್ಲಿ 5 ಜನ 100 ಕ್ಕೆ ವಿದ್ಯಾರ್ಥಿಗಳು ಜೀವಶಾಸ್ತ್ರ 3 ವಿದ್ಯಾರ್ಥಿಗಳು ಗಣಿತದಲ್ಲಿ 8 ಜನ ವಿದ್ಯಾಥಿಗಳು 100ಕ್ಕೆ 100 ಗಣಕ ವಿಜ್ಞಾನದಲ್ಲಿ 7 ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಗಳಿಸಿ ಕಾಲೇಜಿಗೆ ಹಾಗೂ ಪೋಷಕರಿಗೆ ಗೌರವ ತಂದಿರುವ ಎಲ್ಲಾ ಮಕ್ಕಳು, ಉಪನ್ಯಾಸಕರು, ಕಾಲೇಜಿನ ಮುಖ್ಯ ಕಾರ್ಯದರ್ಶಿ ಶ್ರೀರಾಘ ವೇಂದ್ರ ಕೆ. ಪ್ರಾಂಶುಪಾಲ ರಾಜಶೇಖರ ಜಿ ಉಪಪ್ರಾಂಶುಪಾಲ ಬಸವರಾಜ ಅಮರಾಪುರ ಅವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ

# ಕನಕಗಿರಿ : ನವಲಿ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ

ಕನ್ನಡ ಮಾತೃ ಭೂಮಿ ವಾರ್ತೆ

**ಕನಕಗಿರಿ, ಏ.10-**ತಾಲೂಕಿನ ನವಲಿ ಸರಕಾರಿ ಪದವಿ ಪೂರ್ವ ಕಾಲೇಜು 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ1ರಲ್ಲಿ ಶೇಕಡಾ 93.15 ಉತ್ತಮ ಫಲಿತಾಂಶ ದಾಖಲಿಸಿ ಗಮನ ಸೆಳೆದಿದ್ದಾರೆ.

ಕಾಲೇಜು ಮತ್ತೊಮ್ಮೆ ತನ್ನ ಶೈಕ್ಷಣಿಕ ಮೇಲುಗೈಯನ್ನು ಸಾಬೀತುಪಡಿಸಿದೆ.

ಈ ಬಾರಿ ಕಲಾ ವಿಭಾಗದ 53 ಹಾಗೂ ವಾಣಿಜ್ಯ ವಿಭಾಗದ 20 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಕಲಾ ವಿಭಾಗದಲ್ಲಿ 48 ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ವಾಣಿಜ್ಯ ವಿಭಾಗದಲ್ಲಿ ಎಲ್ಲಾ 20 ವಿದ್ಯಾರ್ಥಿಗಳೂ ಉತ್ತೀರ್ಣರಾಗುವ ಮೂಲಕ ಶೇಕಡಾ 100 ಫಲಿತಾಂಶ ಸಾಧಿಸಿರುವುದು ವಿಶೇಷವಾಗಿದೆ.

ಒಟ್ಟು 73 ವಿದ್ಯಾರ್ಥಿಗಳಲ್ಲಿ 24 ಮಂದಿ ಡಿಸ್ಟಿಂಕ್ಷನ್, 42 ಮಂದಿ ಪ್ರಥಮ ಶ್ರೇಣಿ ಮತ್ತು 2 ಮಂದಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಕಲಾ ವಿಭಾಗದಲ್ಲಿ ಪವಿತ್ರ (584/600), ಜಯಲಕ್ಷ್ಮಿ (566/600) ಹಾಗೂ ಹುಲಿಗೆಮ್ಮ (565/600) ಉನ್ನತ ಅಂಕಗಳೊಂದಿಗೆ ಮುಂಚೂಣಿಯಲ್ಲಿ ನಿಂತಿದ್ದಾರೆ. ಪವಿತ್ರ ಅವರು ಇತಿಹಾಸ, ಸಮಾಜಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಷಯಗಳಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದು ವಿಶೇಷ ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಅಜಯ್ ಕುಮಾರ್ (569/600), ರೇಣುಕಾ ತಂ ಅಮರೇಶ (559/600) ಮತ್ತು ಕಾವೇರಿ ತಂ ಹನುಮಂತಪ್ಪ (537/600) ಗಮನಾರ್ಹ ಸಾಧನೆ ಮಾಡಿದ್ದಾರೆ. ರಾಧಿಕಾ ತಂ ರಾಮಪ್ಪ ಅವರು ವ್ಯವಹಾರ ಅಧ್ಯಯನ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದು ಪ್ರಶಂಸೆಗೆ ಪಾತ್ರರಾಗಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಗ್ರಾಮದ ಶಿಕ್ಷಣ ಪ್ರೇಮಿಗಳು, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು, ಉಪಾಧ್ಯಕ್ಷರು, ಪ್ರಾಚಾರ್ಯರು ಮತ್ತು ಉಪನ್ಯಾಸಕ ವೃಂದ ಹರ್ಷ ವ್ಯಕ್ತಪಡಿಸಿ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಹೋರಾಟಗಾರನಾದವನು ಒಳ್ಳೆ ಪತ್ರಕರ್ತನಾಗಲು ಸಾಧ್ಯ- ಹನೀಫ್

ಕನ್ನಡ ಮಾತೃ ಭೂಮಿ ವಾರ್ತೆ




**ವಿಜಯಪುರ,ಏ.10-**ಪ್ರೊ ಎ ಎಸ್ ಹಿಪ್ಪರಗಿ, ಈಶ್ವರ ಚಂದ್ರ ಚಿಂತಾಮಣಿ, ಕಾ ಹು ಬಿಜಾ ಪುರ ವೇದಿಕೆ ವಿಜಯಪುರ :ಒಬ್ಬ ಹೋರಾಟಗಾರನಾದವನು ಒಳ್ಳೆಯ ಪತ್ರಕರ್ತನಾಗಲು ಸಾಧ್ಯ ಎಂದು ಹಿರಿಯ ಪತ್ರಕರ್ತ ಬಿ ಎಂ ಹನೀಫ್ ಹೇಳಿದರು.

ಅವರು ವಿಜಯಪುರ ನಗರದ ದರಾಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದಲ್ಲಿ ಮೊದಲ ದಿನದ ಮೊದಲ ಗೋಷ್ಠಿ ಸಾಮಾಜಿಕ ಬದ್ಧತೆ ಪತ್ರಕರ್ತನಾಗಿ ನನ್ನ ಅನುಭವಗಳು ವಿಷಯದ ಮಂಡನೆ ಮಾಡಿ ಮಾತನಾಡಿದರು.

ಇತ್ತೀಚಿಗೆ ಕೆಲವು ಪತ್ರಕರ್ತರು ನಾವು ಆಕಾಶದಿಂದ ಬಿದ್ದವರು ನಾವು ಯಾರಿಗೆ ಬೇಕಾದರೂ ಏನು ಬೇಕಾದರೂ ಪ್ರಶ್ನೆ ಕೇಳಬಹುದು ಎಂಬ ಭಾವನೆ ಹೊಂದಿದ್ದಾರೆ. ಅವರು ಆಕಾಶದಿಂದ ಬಿದ್ದಂತೆ ವರ್ತಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಸ್ತೆಯಲ್ಲಿ ಅಪಘಾತ ನಡೆದಾಗ ಮೊದಲು ಗಾಯಳುಗಳನ್ನು ರಕ್ಷಣೆ ಮಾಡಬೇಕು, ಇತ್ತೀಚಿಗೆ ಕೆಲವು ದೃಶ್ಯ ಮಾಧ್ಯಮದವರು ಗಯಾಳುಗಳನ್ನು ರಕ್ಷಣೆ ಮಾಡಲು ಮುಂದಾಗದೆ ವಿಡಿಯೋ ಮಾಡುತ್ತ ನಿಲ್ಲುವುದು ಎಷ್ಟು ಸರಿ ಎಂದು ಪ್ರಶ್ನೆ ಮಾಡಿದ ಅವರು ಪತ್ರಕರ್ತ ಮೊದಲು ಮಾನವೀಯ ಬದ್ಧತೆ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಪತ್ರಕರ್ತನಾದವನು ಸಮಾಜದಲ್ಲಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸುದ್ದಿ ಪ್ರಸಾರ ಮಾಡಬೇಕು ಪತ್ರಕರ್ತ ಯಾವಾಗಲು ವಿರೋಧ ಪಕ್ಷದ ನಾಯಕರಂತೆ ಕರ್ತವ್ಯ ನಿರ್ವಹಿಸಬೇಕು ಎಂದರು.

ವಿಜಯಪುರದ ಕ್ರೀಡಾಂಗಣಕ್ಕೆ ಅಂಬೇಡ್ಕರ್ ಹೆಸರು ಇಡಲಿಕ್ಕೆ ಧರಣಿ ಕುಳಿತಿದ್ದರು ಶಾಸಕರಾಗಿದ್ದ ಎಂಬಿ ಪಾಟೀಲ ತಮ್ಮ ತಂದೆ. ಬಿ ಎಂ ಪಾಟೀಲ ಹೆಸರು ಇಡಲು ಒತ್ತಡ ಹಾಕುತ್ತಿದ್ದರು. ಆಗ ಜಿಲ್ಲಾಧಿಕಾರಿಯಾಗಿದ್ದ ಮದನಗೋಪಾಲ ಅವರು ಎಂಬಿ ಪಾಟೀಲ ಅವರು ನೀಡಿದ ದೇಣಿಗೆಯನ್ನು ಹಿಂತಿರುಗಿಸಿ. ರಾತ್ರೋರಾತ್ರಿ ಕ್ರೀಡಾಂಗಣಕ್ಕೆ ಡಾ ಬಿ ಆರ್ ಅಂಬೇಡ್ಕರ್ ಹೆಸರು ಇಟ್ಟು ನಾಲ್ಕು ದಿಕ್ಕಿಗೆ ಬೋರ್ಡ್ ಬರೆಸಿದರು. ಇದನ್ನು ಮೊದಲು ಪ್ರಜಾವಾಣಿಯಲ್ಲಿ ಸುದ್ದಿ ಮಾಡಿದ್ದು ನಾನೇ ಎಂದು ಹೇಳಿದ ಅವರು ಆಗ ನಾನು ಹೋರಾಟಗಾರನಾಗಿದ್ದೆ ಎಂದು ಹೇಳಿದ ಅವರು ಪತ್ರಕರ್ತನಾದವನು ನಾಯಕರನ್ನು ಒಲಿಸಿಕೊಳ್ಳಲು ಸುದ್ದಿ ಮಾಡದೆ ನಾಯಕರಿಗೆ ಮಾಹಿತಿ ಒದಗಿಸುವವನಾಗಿರಬೇಕು ಎಂದರು.

ಸಮಾಜಮುಖಿ ಮಾಸ ಪತ್ರಿಕೆ ಸಂಪಾದಕ ಚಂದ್ರಕಾಂತ ವಡ್ಡು ಅವರು ಮಾತನಾಡಿ ಪತ್ರಕರ್ತ ಹೋರಾಟಗಾರನ ಜೊತೆಗೆ ಒಳ್ಳೆಯ ಭಾಷಣಕಾರನಾಗಿರಬೇಕು ಎಂದು ಹೇಳಿದರು.

ಕಸ್ತೂರಿ ಪತ್ರಿಕೆಯಲ್ಲಿ ಲಂಕೇಶ ಅವರಿಗೆ ಕೇಳದೆ ಸಂಕ್ರಾಂತಿ ನಾಟಕ ಪ್ರಕಟಿಸಿದ್ದೆ ಆ ಸಂದರ್ಭದಲ್ಲಿ ಹಿರಿಯರಾದ ಶಾಮರಾಯರು ಕಸ್ತೂರಿ ಪತ್ರಿಕೆ ಸಂಪಾದಕರಾಗಿದ್ದರು. ಅವರಿಗೆ ಫೋನ್ ಮಾಡಿ ಮಾತನಾಡಿದಾಗ ಆದ ಪ್ರಮಾದವನ್ನು ಮನ್ನಿಸಿ ಯುವ ಪತ್ರಕರ್ತರನ್ನು ಪ್ರೋತ್ಸಾಹಿಸಿದ್ದು ಇಂದಿಗೂ ನನಗೆ ನೆನಪಿದೆ ಎಂದು ಹೇಳಿದರು.

ಸಂವಾದದಲ್ಲಿ ರಶ್ಮಿ ಪಾಟೀಲ ಅವರು ಪತ್ರಿಕೋದ್ಯಮದಲ್ಲಿ ಹೆಣ್ಣು ಮಕ್ಕಳ ಪಾತ್ರ ಮತ್ತು ಸಮಸ್ಯೆ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಬಿ ಎಂ ಹನೀಫ್ ಅವರು ಮಂಡ್ಯದಲ್ಲಿ ಮೊದಲು ಪ್ರಜಾವಾಣಿ ಪತ್ರಿಕೆಯಲ್ಲಿ ಮಹಿಳಾ ವರದಿಗಾರರನ್ನು ಸಂಸ್ಥೆ ಅವರು ನೇಮಕ ಮಾಡಿದ್ದರು ಎಂದು ಹೇಳಿದ ಅವರು ಇಂದು ಪತ್ರಿಕೋದ್ಯಮದಲ್ಲಿ ಸಾಕಷ್ಟು ಜನ ಮಹಿಳೆಯರು ತೊಡಗಿಸಿಕೊಂಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಹಿರಿಯ ವರದಿಗಾರ ರಫಿ ಬಂಡಾರಿ ಅವರು ಮಾತನಾಡಿ ಪತ್ರಕರ್ತರಾದವರು ಸಾಮಾಜಿಕ ಬದ್ಧತೆ ಅಳವಡಿಸಿಕೊಳ್ಳಬೇಕು ಎಂದು ಹೇಳಿದ ಅವರು ಮೇ ಸಾಹಿತ್ಯ ಬಳಗ ಇಂತಹ ಒಳ್ಳೆಯ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಸ್ ಎಂ ಪಾಟೀಲ ಗಣಿಹಾರ, ಯೂಸುಫ್ ನೇವಾರ, ಬಸವರಾಜ ಸೂಳಿಬಾವಿ, ಅನಿಲ ಹೊಸಮನಿ, ಚೆನ್ನು ಕಟ್ಟಿಮನಿ, ವೈ ಎಸ್ ಗುಣಕಿ, ಸುರೇಶ ಬಿಜಾಪುರ,ಬೋಗೇಶ ಸೋಲಾಪುರ ಲಾಯಪ್ಪ ಇಂಗಳೆ ಸೇರಿ ಹಲವರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಆಟೋ ಗ್ಯಾಸ್ ಕೊರತೆ-ವದಂತಿಗಳಿಗೆ ಕಿವಿಗೊಡದಿರಲು ಸಾರ್ವಜನಿಕರಿಗೆ ಕರೆ

ಕನ್ನಡ ಮಾತೃ ಭೂಮಿ ವಾರ್ತೆ

**ಕೊಪ್ಪಳ,ಏ.10-**ರಾಜ್ಯದ ವಿವಿಧ ಆಟೋ ಗ್ಯಾಸ್ ಬಂಕ್‌ಗಳಲ್ಲಿ ಅನಿಲದ ದಾಸ್ತಾನು ಕೊರತೆಯಿದೆ ಎಂಬ ತಪ್ಪು ಮಾಹಿತಿಯ ಆಧಾರದ ಮೇಲೆ, ಕಳೆದ ಕೆಲವು ದಿನಗಳಿಂದ ಆಟೋ ಮಾಲೀಕರು ಮತ್ತು ಚಾಲಕರು ಬಂಕ್‌ಗಳ ಮುಂದೆ ಸುದೀರ್ಘ ಸರತಿ ಸಾಲಿನಲ್ಲಿ ನಿಲ್ಲುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳು ಕೇವಲ ವದಂತಿಗಳಾಗಿದ್ದು, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟಪಡಿಸಿದೆ.ಕೆಲವು ಖಾಸಗಿ ಆಟೋ ಗ್ಯಾಸ್ ಸರಬರಾಜು ಸಂಸ್ಥೆಗಳಲ್ಲಿ ಮಾತ್ರ ಅಲ್ಪಮಟ್ಟಿನ ಕೊರತೆ ಕಂಡುಬಂದಿದ್ದು, ಇದನ್ನು ಸರಿಪಡಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಐಓಇ (ಇಂಡಿಯನ್ ಆಯಿಲ್), ಆಕಇ (ಭಾರತ್ ಪೆಟ್ರೋಲಿಯಂ) ಮತ್ತು ಏಕಇ (ಹಿಂದೂಸ್ತಾನ್ ಪೆಟ್ರೋಲಿಯಂ) ಮೂಲಕ ಹೆಚ್ಚಿನ ಪ್ರಮಾಣದ ಅನಿಲವನ್ನು ಪೂರೈಕೆ ಮಾಡಲಾಗುತ್ತಿದೆ.

ಹಿಂದೆ ಈ ಮೂರು ಸಂಸ್ಥೆಗಳು ಸರಾಸರಿ 56.67 ಮೆಟ್ರಿಕ್ ಟನ್ ಆಟೋ ಗ್ಯಾಸ್ ಅನ್ನು ಸರಬರಾಜು ಮಾಡುತ್ತಿದ್ದವು. ಆದರೆ ಪ್ರಸ್ತುತ ಬೇಡಿಕೆಯನ್ನು ಪೂರೈಸಲು ಸರಬರಾಜು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಾಗಿದ್ದು, ಸದ್ಯ ಪ್ರತಿದಿನ ಸರಾಸರಿ 83.58 ಮೆಟ್ರಿಕ್ ಟನ್ ಗ್ಯಾಸ್ ಅನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೂರೈಸಲಾಗುತ್ತಿದೆ.

ಕಳೆದ ಐದು ದಿನಗಳ ಪೂರೈಕೆ ವಿವರ:

ಕಳೆದ ಏಪ್ರಿಲ್ 2 ರಿಂದ ಏಪ್ರಿಲ್ 6 ರವರೆಗಿನ ಅಂಕಿಅಂಶಗಳನ್ನು ಗಮನಿಸಿದರೆ, ಪೂರೈಕೆಯಲ್ಲಿ ಸ್ಥಿರತೆ ಇರುವುದು ಕಂಡುಬರುತ್ತದೆ. ಏಪ್ರಿಲ್ 2 ರಂದು 87.78 ಮೆಟ್ರಿಕ್ ಟನ್, ಏಪ್ರಿಲ್ 3 ರಂದು 86.05 ಮೆಟ್ರಿಕ್ ಟನ್, ಏಪ್ರಿಲ್ 4 ರಂದು 84.80 ಮೆಟ್ರಿಕ್ ಟನ್, ಏಪ್ರಿಲ್ 5 ರಂದು ಗರಿಷ್ಠ 94.11 ಮೆಟ್ರಿಕ್ ಟನ್ ಹಾಗೂ ಏಪ್ರಿಲ್ 6 ರಂದು 83.58 ಮೆಟ್ರಿಕ್ ಟನ್ ಅನಿಲವನ್ನು ಈ ಮೂರು ಪ್ರಮುಖ ಸಂಸ್ಥೆಗಳು ಯಶಸ್ವಿಯಾಗಿ ಪೂರೈಕೆ ಮಾಡಿವೆ.ಆದ್ದರಿಂದ, ರಾಜ್ಯದ ಆಟೋ ಮಾಲೀಕರು ಮತ್ತು ಚಾಲಕರು ಇಂತಹ ಯಾವುದೇ ಸುಳ್ಳು ವದಂತಿಗಳನ್ನು ನಂಬಬಾರದು ಮತ್ತು ಆತಂಕಕ್ಕೊಳಗಾಗಿ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಲ್ಲಬಾರದು ಎಂದು ಸರ್ಕಾರ ಮನವಿ ಮಾಡಿದೆ. ಅನಿಲ ಪೂರೈಕೆ ವ್ಯವಸ್ಥಿತವಾಗಿ ನಡೆಯುತ್ತಿದ್ದು, ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸಬೇಕೆಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

# ನವಯುಗ ಮಹಾವಿದ್ಯಾಲಯದ ಎನ್‌ಎಸ್‌ಎಸ್ 7ನೇ ದಿನದ ಶಿಬಿರ

ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.10-** ನವಯುಗ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ಆಯೋಜಿಸಿದ್ದ 7 ದಿನಗಳ ವಿಶೇಷ ಶಿಬಿರದ ಭಾಗವಾಗಿ, ಮೂರನೇ ದಿನ ಉಪನ್ಯಾಸ ಕಾರ್ಯಕ್ರ ಮಕ್ಕಾಗಿ ಆಗಮಿಸಿರುವ ಅನಿಲ್ ಅಫ್ರಾಳ್ ಉಪನ್ಯಾಸಕರು ಆಂಗ್ಲ ಭಾಷೆ ಅಧ್ಯಯನ ವಿಭಾಗ ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ಇವರು ಸಂವಹನ ಕಲೆ ಉದ್ಯೋಗದ ಮೆಟ್ಟಿಲು ಎಂದು ಕರೆಯುತ್ತಾರೆ ಉದ್ಯೋಗಾಕಾಂ ಕ್ಷಿಗಳು ಮಾತನಾಡಿದಾಗ ಅವರಲ್ಲಿರುವ ಉದ್ಯೋಗಕ್ಕೆ ಸಂಬಂಧಿಸಿದಂತಹ ವಾಕ್ ಚಾತುರ್ಯ, ಸ್ಪಷ್ಟತೆ, ವಿಷಯ ಮಂಡನೆ, ಮನವೊಲಿಕೆ, ಪರಿಣಾಮ ಮತ್ತು ಪ್ರಭಾವ, ನಾಜೂಕು ಮತ್ತು ಸೌಹಾರ್ದಯುತ ನಡವಳಿಕೆಯನ್ನು ಗುರುತಿಸುತ್ತೇವೆ. ಇವೆಲ್ಲ ಅಂಶಗಳನ್ನು ಜನಸಾಮಾನ್ಯರ ಭಾಷೆಯಲ್ಲಿ ಸರಳವಾಗಿ ತೋರಿಸಿ

ಕೊಡಬೇಕೆಂದರೆ ಇದರಲ್ಲಿ ಎರಡು ಪ್ರಧಾನ ಭಾಗಗಳಿವೆ, ಅವು ಏನನ್ನು ಮಾತನಾಡಬೇಕು' ಮತ್ತು ಹೇಗೆ ಮಾತನಾಡಬೇಕು' ಎಂಬುದು. ತಿಳಿಸಿದರು

ಅದೇರೀತಿ ಇನ್ನೊಬ್ಬರು ವಿಶೇಷ ಉಪನ್ಯಾಸಕರಾಗಿ ಆಗಮಿಸಿರುವಂತ ಬಜಾರಪ್ಪ. ಉಪನ್ಯಾಸರು ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು ಇವರುವಿದ್ಯಾಭ್ಯಾಸ ಮುಗಿಸಿ ಉದ್ಯೋಗದ ವಲಯದಲ್ಲಿ ನೀವು ಹೆಜ್ಜೆಗಳನ್ನು ಇಡುತ್ತೀರಾ. ಆಗ ನಿಮ್ಮ ಎರಡು ದಶಕಗಳ ವಿದ್ಯಾಭ್ಯಾಸ ನಿಮಗೆ ನೀಡಿದ ಅಕಾಡೆಮಿಕ್ ಹಾಗೂ ಟೆಕ್ನಿಕಲ್ ಕೌಶಲ್ಯವನ್ನು ಒಂದು ತಕ್ಕಡಿಯಲ್ಲಿ ಇಟ್ಟರೆ ಅದಕ್ಕಿಂತ ಭಾರವಾಗಿರುವುದು ಮತ್ತೊಂದು ತಕ್ಕಡಿಯಲ್ಲಿ ನಿಮ್ಮ ಸಂವಹನ ಕೌಶಲ್ಯ. ನಿಮ್ಮ ವೃತ್ತಿಪರ ಜೀವನವನ್ನು ಮೂರು ಆರ್' ಗಳು (ರೆಮ್ಯುನರೇಶನ್, ರೆಸ್ಪಾನ್ಸಿಬಿಲಿಟಿ ಹಾಗೂ ರೆಸ್ಪೆಕ್ಟ್) ನಿರ್ಧರಿಸುತ್ತವೆ.

ತಿಳಿಸಿದರು. ಅದೇ ರೀತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀ ಮಲ್ಲಣ್ಣ ಗೌಡ ವಾಣಿಜ್ಯವಿಭಾಗ ಉಪನ್ಯಾಸಕರು ಇವರು ಇಂಟರ್ನೆಟ್, ದೂರಸಂಪರ್ಕ ಮತ್ತು ಇ-ಆಡಳಿತದ ಮೂಲಕ ಸೇವೆಗಳನ್ನು ನಾಗರಿಕರ ಮನೆಬಾಗಿಲಿಗೆ ತಲುಪಿಸುತ್ತಿದೆ. ಎಂದು ಹೇಳಿದರು

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವಂತಹ ನವಯುಗ ಮಹಾವಿದ್ಯಾಲಯದ ಶಿವಾನಂದ ಉಪನ್ಯಾಸಕರು ಇತಿಹಾಸ ವಿಭಾಗ ಅವರು ಭಾರತದ ಆರ್ಥಿಕ ಪ್ರಗತಿ, ಆರೋಗ್ಯ ರಕ್ಷಣೆ, ಕೃಷಿ ಮತ್ತು ಕೈಗಾರಿಕಾ ವಲಯಗಳ ಆಧುನೀಕರಣದಲ್ಲಿ ಮಾಹಿತಿ ತಂತ್ರಜ್ಞಾನ (ಐಖ), ಜೈವಿಕ ತಂತ್ರಜ್ಞಾನ (ಆಖ) ಹಾಗೂ ನ್ಯಾನೋ ತಂತ್ರಜ್ಞಾನಗಳು ಪ್ರಮುಖ ಪಾತ್ರ ವಹಿಸುತ್ತಿವೆ.' ಎಂದು ಹೇಳಿದರು ಈ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಅಧಿಕಾರಿಗಳಾದ ನರೇಶ್ ಎಲ್ ಹಾಗೂ ಉಪನ್ಯಾಸಕ ರಾದ ನರಸಿಂಹ ಸಾಗರ್, ಸಿದ್ದಯ್ಯ ಸ್ವಾಮಿ ಈರೇಶ್ ಹಾಗೂ ವಿದ್ಯಾರ್ಥಿ ಗಳು ಉಪಸ್ಥಿತರಿದ್ದರು ಭಗತ್ ಸಿಂಗ್ ತಂಡದವರು ಕಾರ್ಯಕ್ರಮವನ್ನು ನಿರೂಪಿಸಿದರು

# ಸಂಘಟಿತರಾಗಿ ಸೌಕರ್ಯ ಪಡೆದುಕೊಳ್ಳಿ -ನಾಗರಾಜ ಪೂಜಾರ್

ಕನ್ನಡ ಮಾತೃ ಭೂಮಿ ವಾರ್ತೆ

**ಸಿಂಧನೂರು,ಏ,10-**ಕೃಷಿ ಕೂಲಿಕಾರ್ಮಿಕರು ಸಂಘಟಿ ತರಾಗಿ ಸರ್ಕಾರದಿಂದ ಶಾಸನಬದ್ಧವಾಗಿ ದೊರೆಯುವ ಸೌಕರ್ಯಗಳನ್ನು ಪಡೆದು ಕೊಳ್ಳಬೇಕು ಎಂದು ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ (ಆಯಲಾರ್) ರಾಜ್ಯ ಸಂಚಾ ಲಕ ನಾಗರಾಜ ಪೂಜಾರ್ ಹೇಳಿದರು.

ತಾಲೂಕಿನ ದಢೇಸುಗೂರು ಗ್ರಾಮದಲ್ಲಿ ಶುಕ್ರವಾರ ಆಯಲಾರ್ ಗ್ರಾಮ ಘಟಕ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಗ್ರಾಮೀಣ ಕೃಷಿ ಕೂಲಿಕಾರ್ಮಿಕರಿಗೆ ನಿಗದಿತ ಕೂಲಿ ಮತ್ತು ಆದಾಯ ಇಲ್ಲ. ಇದರಿಂದ ಕುಟುಂಬ ನಿರ್ವಹಣೆ ಮಾಡಲು ಸಂಕಷ್ಟ ಎದುರಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ಅನಾರೋಗ್ಯ ಇವರನ್ನು ಬಾಧಿಸುತ್ತಿವೆ.

ಕೃಷಿ ಸೇರಿ ಗ್ರಾಮೀಣ ಪ್ರದೇಶದ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುವ ಕೃಷಿ ಕೂಲಿಕಾರ ಕುಟುಂಬಗಳು ಇಂದಿಗೂ ಹಸಿವಿನಿಂದ ಬಳಲುತ್ತಿವೆ. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಕೃಷಿ ಕೂಲಿಕಾರ್ಮಿಕರನ್ನು ಸಂಪೂರ್ಣ ನಿರ್ಲಕ್ಷಿಸಿದ್ದು, ಅಲ್ಪಸ್ವಲ್ಪ ಆಸರೆಯಾಗಿದ್ದ, ಮನರೇಗಾ ಯೋಜನೆಯನ್ನು ಬದಲಿಸಿ, ಜಿರಾಮ್‌ಜಿ ಯೋಜನೆ ಜಾರಿಗೊಳಿಸುವ ಮೂಲಕ ಉದ್ಯೋಗದ ಹಕ್ಕನ್ನೇ ಕಸಿದುಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐಎಂಎಲ್ ಲಿಬರೇಶನ್ ರಾಜ್ಯ ಸಮಿತಿ ಸದಸ್ಯ ವಿಜಯರ್ ದೊರೈರಾಜು ಮಾತನಾಡಿ, ಸರ್ಕಾರಗಳು ಗ್ರಾಮೀಣ ಪ್ರದೇಶದಲ್ಲಿ ಮನೆಗೊಂದು ಶೌಚಾಲಯ ಎಂದು ಅಭಿಯಾನ ನಡೆಸುತ್ತವೆ. ಮನೆಯೇ ಇಲ್ಲದವರಿಗೆ ಶೌಚಾಲಯ ಎಲ್ಲಿಂದ ಬರುತ್ತದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ದುಡಿಯುವ ಜನವಿ ರೋದಿ ಕಾಯ್ದೆ, ಕಾನೂನುಗಳನ್ನು ಜಾರಿಗೆ ತಂದು, ತಾವು ಜನಪರ ಎಂದು ಬಿಂಬಿಸುತ್ತಿವೆ. ಇದನ್ನು ಗ್ರಾಮೀಣ ಪ್ರದೇಶದ ಕೂಲಿಕಾರರು ಅರಿತುಕೊ ಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಆಯಲರ್ಾ ಜಿಲ್ಲಾ ಘಟಕ ಸಹ ಸಂಚಾಲಕ ರಾಘವೇಂದ್ರ ಉಪ್ಪಳ, ಸಿಪಿಐಎಂಎಲ್ ಲಿಬರೇಶನ್ ತಾಲ್ಲೂಕು ಘಟಕ ಕಾರ್ಯದರ್ಶಿ ಬಸವರಾಜ ಬೆಳಗುರ್ಕಿ, ಪಂಪಾಪತಿ ಸೇರಿದಂತೆ ಇನ್ನಿತರರು ಇದ್ದರು. ಆಯಲಾರ್ ಜಿಲ್ಲಾ ಸಂಚಾಲಕ ಆರ್.ಎಚ್. ಕಲಮಂಗಿ ಕಾರ್ಯಕ್ರಮ ನಿರ್ವಹಿಸಿದರು.

**ಗ್ರಾಮ ಘಟಕ ರಚನೆ:** ದಢೇಸುಗೂರು ಆಯಲಾರ್ ಗ್ರಾಮ ಘಟಕದ ನೂತನ ಅಧ್ಯಕ್ಷರನ್ನಾಗಿ ವೀರಭದ್ರಪ್ಪ, ಉಪಾಧ್ಯಕ್ಷರಾಗಿ ತುಳಸಪ್ಪ, ಆರೀಫ್, ಕಾರ್ಯದರ್ಶಿಯಾಗಿ ಮಂಜಪ್ಪ, ಸಂಘಟನಾ ಕಾರ್ಯದರ್ಶಿ ಗಳಾಗಿ ಸುಂಕಪ್ಪ, ನಾಗೇಶ, ಶಿವಪ್ಪ, ಗೌರವಾಧ್ಯಕ್ಷರಾಗಿ ಮುದಿಯಪ್ಪ , ಖಜಾಂಚಿ ವಿನಯ್ ಸೇರಿದಂತೆ ಸದಸ್ಯರನ್ನು ಆಯ್ಕೆ ಮಾಡಲಾಯಿತು.

# ಕೊಲೆ ಆರೋಪಿಗಳಿಗೆ ಜೀವಾವಧಿ ಶಿಕ್ಷೆ, ದಂಡ ವಿಧಿಸಿ ನ್ಯಾಯಾಲಯ

ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸಗೂರ,ಏ.10-**

ಗ್ರಾಮ ಪಂ. ಚುನಾವಣೆಯ ಹಳೆಯ ದ್ವೇಷವನ್ನಿಟ್ಟುಕೊಂಡು ವ್ಯಕ್ತಿಯೊರ್ವನನ್ನು ಕೊಲೆಗೈದ 10 ಆರೋಪಿಗಳಿಗೆ ನ್ಯಾಯಾಲಯವು ಜೀವಾವಧಿ ಕಾರಾಗೃಹ ಶಿಕ್ಷೆ ಮತ್ತು ದಂಡ ವಿಧಿಸಿ ತೀರ್ಪು ನೀಡಿದೆ.

ಲಿಂಗಸಗೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಗುಡದನಾಳ ಗ್ರಾಮದ ಶರಣಬಸವ ಎನ್ನುವ ವ್ಯಕ್ತಿ ಯನ್ನು ಆರೋಪಿತರಾದ ಜಗದೀಶ ತಂದೆ ಶರಣಪ್ಪ, ಯಮನೂರ ತಂದೆ ಅಮರಪ್ಪ, ಮಹಾಂಕಾಳಪ್ಪ ತಂದೆ ಅಮರಪ್ಪ, ಬಸವರಾಜ ತಂದೆ ಶರಣಪ್ಪ ದೊಡ್ಡಮನಿ,ಹನುಮಂತಿ ಗಂಡ ಅಮರಪ್ಪ, ದುರುಗಪ್ಪ ತಂದೆ ನಿಂಗಪ್ಪ, ಶರಣಬಸವ ತಂದೆ ಮಾನಪ್ಪ, ಕೆಂಚವ್ವ ಕೆಂಚಮ್ಮ ಗಂಡ ಮಾನಪ್ಪ ಯಲ್ಲವ್ವ ಯಲ್ಲಮ್ಮ ಗಂಡ ನಿಂಗಪ್ಪ, ನಿಂಗಪ್ಪ ತಂದೆ ಅಮರಪ್ಪ ದುರುಗಪ್ಪ ದೊಡ್ಡಮನಿ ಸಾ:ಗುಡದನಾಳ ಇವರಿಗೂ ಮತ್ತು ಈ ಪ್ರಕರಣದ ಫಿರ್ಯಾದಿ ನೀಡಿದ ಹನ ಮಂತಮ್ಮ ತಾಯಿ ಹುಲಿಗೆಮ್ಮ ಹೊಸ ಮನಿ ಇವರ ನಡುವೆ ಗ್ರಾ.ಪಂ. ಚುನಾವಣೆ ವಿಚಾರದಲ್ಲಿ ವೈಷಮ್ಯವಿತ್ತು.

ಈ ವಿಚಾರವಾಗಿ ದಿ.15-02-2021 ರಂದು ರಾತ್ರಿ 10-30 ಗಂಟೆಗೆ ಎಲ್ಲರೂ ಸೇರಿಕೊಂಡು ತನ್ನ ಮಗ ಶರಣಬಸವನ ಮೇಲೆ ಕಟ್ಟಿಗೆ ಕೊಡಲಿ ಕಲ್ಲಿನಿಂದ ಹೊಡೆದು ಹಲ್ಲೆ ಮಾಡಿದ್ದು ತಕ್ಷಣವೇ ತನ್ನ ಮಗನಾದ ಶರಣಬಸ ವನನ್ನು ಬಾಗಲಕೋಟೆಯ ಕೆರೊಡಿ ಆಸ್ಪತ್ರೆಗೆ ದಾಖಲಿಸಿದಾಗ ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆಂದು ಮೃತನ ತಾಯಿ ಹನುಮಂತಮ್ಮ ತಾಯಿ ಹುಲಿಗೆಮ್ಮ ಹೊಸಮನಿ ಇವರು ನೀಡಿದ ದೂರಿನ ಆಧಾರದ ಮೇಲೆ ಅಂದಿನ ತನಿಖಾಧಿಕಾರಿಗಳಾದ ಸಿಪಿಐ ಮಹಾಂತೇಶ್ ಸಜ್ಜನ್, ಹಾಗೂ ರಮೇಶ್ ಕುಲಕರ್ಣಿ ಇವರು ಪ್ರಕರಣ ದಾಖಲಿಸಿಕೊಂಡು ಪ್ರಕರಣದ ತನಿಖೆ ಕೈಗೊಂಡು ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ವಾದ ವಿವಾದಗಳನ್ನು ಆಲಿಸಿದ 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಲಯ ರಾಯಚೂರು, ಪೀಠಾ ಸಿನ ಲಿಂಗಸಗೂರು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರಾದ ಬಿ.ಬಿ ಜಕಾತಿ ರವರು ದಿ.10-04 -2026 ರಂದು ಆರೋಪಿತರಿಗೆ ಜೀವಾವಧಿ ಕಾರಾಗೃಹ ಶಿಕ್ಷೆ ಹಾಗೂ ತಲಾ ರೂ.19,500/- ದಂಡ ವಿಧಿಸಿ ತಿರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರಕಾರಿ ಅಭಿಯೋಜಕರಾದ ಮಂಜುನಾಥ ಬೇರ್ಗಿ (ಹುಳ್ಕಿಹಾಳ್) ಲಿಂಗಸಗೂರು ರವರು ವಾದ ಮಂಡಿಸಿದ್ದರು.

# ...ಮೊದಲನೇ ಪುಟದಿಂದ

## ಮಲ್ಲಿಕಾರ್ಜುನ ಖರ್ಗೆಯವರ ತೇಜೋವಧೆ- ಎ.ವಸಂತಕುಮಾರ ಆರೋಪ

ತೆಗೆದುಕೊಂಡು ಜನರ ಮನವೊಲಿಸಿದ್ದು ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಿದ್ದಾರೆ. ಚುನಾವಣೆಯಲ್ಲಿ ಸವಾಲಾಗಿ ಸ್ವೀಕರಿಸಿ ಆರ್.ಬಿ.ತಿಮ್ಮಾಪುರು ಸೇರಿದಂತೆ ಸಚಿವ ಸತೀಶ ಜಾರಕಿಹೊಳೆ, ಲಕ್ಷ್ಮಣ ಸವದಿ, ಕಾಶಪ್ಪನವರ್ ಸೇರಿದಂತೆ ಪಂಚಮ ಸಾಲಿ ಸಮೂದಾಯ ನಾಯಕರುಗಳು ಪಕ್ಷದ ಅಬ್ಯರ್ಥಿ ಗೆಲುವಿಗೆ ಶ್ರಮಿಸಿದ್ದಾರೆ. ಒಳ ಮೀಸಲಾತಿ ಜಾರಿಯ ಕುರಿತಂತೆ ಎಡ ಮತ್ತುಬಲಗೈ ಸಮೂದಾಯ ಜನರಲ್ಲಿರುವ ಗೊಂದಲವನ್ನು ಮಖಂಡರೊಂದಿಗೆ ಚರ್ಚಿಸಿ ಗೊಂದಲ ನಿವಾರಿಸಲಾಗಿದೆ. ಸಮೂದಾಯ ಜನರು ಕಾಂಗ್ರೆಸ್ ಬೆಂಬಲಿಸಿದ್ದಾರೆ. ಮುಂದಿನ ಸಚಿವ ಸಂಪುಟದಲ್ಲಿ ಒಳ ಮೀಸಲು ಜಾರಿಗೆ ನಿರ್ಧರಿಸಲಾಗುತ್ತದೆ ಎಂದರು. ಈ ಸಂದರ್ಬದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಪಾಟೀಲ್ಗ ಇಟಗಿ, ದರೂರು ಬಸವರಾಜ, ಅಬ್ದುಲ್ ಕರೀಂ, ಎಂ.ಕೆ.ಬಾಬರ, ಕೆ.ಅಸ್ಲಂಪಾಷಾ, ತಲೆಕಾಯಿ ಮಾರೆಪ್ಪ, ಶ್ರೀನಿವಾಸ ಸಿಂಧೆ, ಡಿ.ಕೆ.ಮುರುಳಿ ಯಾದವ, ರಾಮಕೃಷ್ಣ, ಮಾರೆಪ್ಪ, ಉಸ್ಮಾನ, ಜೆ.ತಿಮ್ಮಪ್ಪ ಸೇರಿ ಅನೇಕರಿದ್ದರು.

## ಹೆಂಡತಿ ಮನೆಗೆ ಅಕ್ರಮ ಪ್ರವೇಶ: ಆರೋಪಿ ವಿರುದ್ಧ ದೂರು ದಾಖಲು

ಇಷ್ಟೊತ್ತಿನಲ್ಲಿ ಇಲ್ಲಿಗೆ ಯಾಕೆ ಬಂದಿದ್ದೀಯಾ ಎಂದು ಕೇಳಿದಾಗ, ಆರೋಪಿಯು ಅದನ್ನು ನನಗೇನು ಕೇಳುತ್ತೀಯ, ನಿನ್ನ ಹೆಂಡತಿಯನ್ನು ಕೇಳು. ಪದೇಪದೇ ಕೇಳಿದರೆ ನಿನ್ನನ್ನು ಕೊಂದುಬಿಡುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ಆರೋಪಿಯ ವಿರುದ್ಧ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

## 2 ತಿಂಗಳು ವಿನಾಯಿತಿ: ಪೋಷಕ ಸಂಘಟನೆಗಳಿಗೆ ನಿರಾಸೆ

ಪೂರ್ಣಗೊಂಡ ವಿದ್ಯಾರ್ಥಿಗಳು 1ನೇ ತರಗತಿ ಸೇರಲು ಅರ್ಹ ಎಂದು ನಿಗದಿಪಡಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ (ಪ್ರಾಥಮಿಕ) ಸರ್ಕಾರದ ಅಧೀನ ಕಾರ್ಯದರ್ಶಿ ವಿದ್ಯಾ ಹೆಚ್.ಪೈ. ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಪೋಷಕ ಸಂಘಟನೆಗಳ ಹೋರಾಟಕ್ಕೆ ಹಿನ್ನಡೆ: ಹಿಂದಿನ ವರ್ಷದಂತೆ ಈ ಬಾರಿ 5.5 ವರ್ಷ ದಾಟಿದವರಿಗೆ 1ನೇ ತರಗತಿ ಸೇರಲು ಅವಕಾಶ ಕಲ್ಪಿಸಬೇಕು ಎಂದು ಪೋಷಕ ಸಂಘಟನೆಗಳು ಒತ್ತಾಯಿಸಿ ಸಾಮಾಜಿಕ ಜಾಲತಾಣದಲ್ಲಿ ದೊಡ್ಡ ಮಟ್ಟದಲ್ಲಿ ಅಭಿಯಾನ ಕೈಗೊಂಡಿದ್ದವು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಶಿಕ್ಷಣ ಇಲಾಖೆಯ ಸಚಿವರನ್ನು ಖುದ್ದು ಭೇಟಿ ಮಾಡಿದ್ದರು. 50 ದಿನಗಳ ಕಾಲ ವಯೋಮಿತಿ ಸಡಿಲಿಕೆಯಿಂದ ರಾಜ್ಯದಲ್ಲಿ ಸುಮಾರು 4 ಲಕ್ಷ ಮಕ್ಕಳಿಗೆ ಅನ್ಯಾಯವಾಗಲಿದೆ. ಪೋಷಕರ ಒತ್ತಾಯಕ್ಕೆ ಮಣಿಯದ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಎರಡು ತಿಂಗಳು ಸಡಿಲಿಸಿ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶದಿಂದ ನಿರಾಸೆಯಾಗಿದೆ. ಮುಂದೇನು ಮಾಡಬೇಕು ಎಂಬುದರ ಬಗ್ಗೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಪೋಷಕ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ಬಿ.ಎನ್.ಯೋಗಾನಂದ ತಿಳಿಸಿದರು.

## ಕೆಪಿಸಿಎಲ್ ದಾಖಲೆ: 2025-26ನೇ ಸಾಲಿನಲ್ಲಿ 15,509 ದಶಲಕ್ಷ ಯೂನಿಟ್ ಜಲ ವಿದ್ಯುತ್ ಉತ್ಪಾದನೆ

2024-25ನೇ ಸಾಲಿನಲ್ಲಿ 13,853 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಿರುವುದು ಇದುವರೆಗಿನ ದಾಖಲೆಯಾಗಿತ್ತು.

ಕೆಪಿಸಿಎಲ್ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ಶ್ರಮಿಸಿದೆ. ಶಿವನಸಮುದ್ರ, ಶಿಂಷಾ, ಶರಾವತಿ ಹಾಗೂ ಮಹಾತ್ಮ ಗಾಂಧಿ ಜಲ ವಿದ್ಯುತ್ ಕೇಂದ್ರದ ಕೆಲವು ಘಟಕಗಳು ರಾಜ್ಯದ ಅತ್ಯಂತ ಹಳೆಯ ಜಲವಿದ್ಯುತ್ ಕೇಂದ್ರಗಳಾಗಿದ್ದರೂ ಈ ಘಟಕಗಳ ಕಾರ್ಯಕ್ಷಮತೆ ಗಮನಾರ್ಹವಾಗಿದೆ. ಉತ್ತಮ ನಿರ್ವಹಣೆಯಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಸಾಧ್ಯವಾಗಿದೆ ಎಂದು ಕೆಪಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ತಿಳಿಸಿದ್ದಾರೆ.

ಶರಾವತಿ, ವಾರಾಹಿ ಕಣಿವೆಯಲ್ಲೂ ಹೊಸ ಮೈಲಿಗಲ್ಲು: ರಾಜ್ಯದಲ್ಲಿ ಅತಿ ಹೆಚ್ಚು ಜಲ ವಿದ್ಯುತ್ ಉತ್ಪಾದನೆಯಾಗುವ ಶರಾವತಿ ಮತ್ತು ವಾರಾಹಿ ಕಣಿವೆಯ ವಿದ್ಯುತ್ ಸ್ಥಾವರಗಳಲ್ಲೂ 2025-26ನೇ ಸಾಲಿನಲ್ಲಿ ಒಟ್ಟಾರೆ 8,696 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ನಿರ್ಮಿಸಲಾಗಿದೆ.

ಶರಾವತಿ ಕಣಿವೆಯಲ್ಲಿ 2025-26ನೇ ಸಾಲಿಗೆ ಸಿಇಎ 4,800 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ನಿಗದಿಪಡಿಸಿದ್ದರೆ ಅದನ್ನು ಮೀರಿ 5642 ಮಿಲಿಯನ್ ಯೂನಿಟ್ (ಶೇ. 17.54ರಷ್ಟು ಹೆಚ್ಚು) ವಿದ್ಯುತ್ ಉತ್ಪಾದನೆಯಾಗಿದೆ. ಅದೇ ರೀತಿ ಮಹಾತ್ಮಾ ಗಾಂಧಿ ವಿದ್ಯುತ್ ಸ್ಥಾವರದಲ್ಲಿ ಸಿಇಎ 549 ದಶಲಕ್ಷ ಯೂನಿಟ್ ಉತ್ಪಾದನೆ ನಿಗದಿಪಡಿಸಿದ್ದರೆ, ಅದನ್ನು ಮೀರಿ 643 (ಶೇ. 17.15ರಷ್ಟು ಹೆಚ್ಚು), ಗೇರುಸೊಪ್ಪದಲ್ಲಿ ಸಿಇಎ ಗುರಿ 1060 ದಶಲಕ್ಷ ಯೂನಿಟ್ ಇದ್ದರೆ, ಅದನ್ನು ಮೀರಿ 644 ದಶಲಕ್ಷ ಯೂನಿಟ್ (ಶೇ. 7.63ರಷ್ಟು ಹೆಚ್ಚು), ವರಾಹಿಯಲ್ಲಿ ಸಿಇಎ ಗುರಿ 1060 ದಶಲಕ್ಷ ಯೂನಿಟ್ ಇದ್ದರೆ, 1599 ದಶಲಕ್ಷ ಯೂನಿಟ್ (ಶೇ. 50.85ರಷ್ಟು ಹೆಚ್ಚು), ಭದ್ರಾದಲ್ಲಿ ಸಿಇಎ ಗುರಿ 55 ದಶಲಕ್ಷ ಯೂನಿಟ್ ಇದ್ದರೆ, 68 ದಶಲಕ್ಷ ಯೂನಿಟ್ (ಶೇ. 25.39ರಷ್ಟು ಹೆಚ್ಚು), ಶಿಂಷಾದಲ್ಲಿ ಸಿಇಎ ಗುರಿ 47 ದಶಲಕ್ಷ ಯೂನಿಟ್ ಇದ್ದರೆ, ಅದನ್ನು ಮೀರಿ 66 ದಶಲಕ್ಷ ಯೂನಿಟ್ (ಶೇ. 41.03ರಷ್ಟು ಹೆಚ್ಚು) ಹಾಗೂ ಮಾಣಿಯಲ್ಲಿ ಸಿಇಎ ಗುರಿ 24 ದಶಲಕ್ಷ ಯೂನಿಟ್ ಇದ್ದರೆ, 32 ದಶಲಕ್ಷ ಯೂನಿಟ್ (ಶೇ. 34.37ರಷ್ಟು ಹೆಚ್ಚು) ವಿದ್ಯುತ್ ಉತ್ಪಾದನೆ ಮಾಡಲಾಗಿದೆ.

ಇನ್ನು ಮೂರು ಜಲ ವಿದ್ಯುತ್ ಸ್ಥಾವರಗಳ ವಿದ್ಯುತ್ ಉತ್ಪಾದನೆಯಲ್ಲಿ ಸಾರ್ವಕಾಲಿಕ ದಾಖಲೆ ಮಾಡಲಾಗಿದೆ. ಮಹಾತ್ಮಾ ಗಾಂಧಿ ವಿದ್ಯುತ್ ಸ್ಥಾವರದಲ್ಲಿ ಈ ಹಿಂದಿನ ಗರಿಷ್ಠ ದಾಖಲೆ 550 (2021-22ರಲ್ಲಿ) ದಶಲಕ್ಷ ಯೂನಿಟ್ ಇದ್ದರೆ, 2025-26ನೇ ಸಾಲಿನಲ್ಲಿ 643 ದಶಲಕ್ಷ ಯೂನಿಟ್ (ಶೇ. 16.92ರಷ್ಟು ಹೆಚ್ಚು), ಗೇರುಸೊಪ್ಪದಲ್ಲಿ ಈ ಹಿಂದಿನ ದಾಖಲೆ 641 (2007-08ರಲ್ಲಿ) ದಶಲಕ್ಷ ಯೂನಿಟ್ ಇದ್ದರೆ, ಈ ಬಾರಿ 644 ದಶಲಕ್ಷ ಯೂನಿಟ್ (0.39ರಷ್ಟು ಹೆಚ್ಚು) ಹಾಗೂ ವಾರಾಹಿಯಲ್ಲಿ ಈ ಹಿಂದಿನ ದಾಖಲೆ 1401 ದಶಲಕ್ಷ ಯೂನಿಟ್ (2007-08 ಇದ್ದರೆ, ಈ ಬಾರಿ 1599 ದಶಲಕ್ಷ ಯೂನಿಟ್ (ಶೇ. 14.13ರಷ್ಟು ಹೆಚ್ಚು) ವಿದ್ಯುತ್ ಉತ್ಪಾದನೆ ಮಾಡಲಾಗಿದೆ.

ಕಳೆದ ವರ್ಷ ಸಾಕಷ್ಟು ಮಳೆ ಬಿದ್ದಿರುವುದರ ಜತೆಗೆ ವಿದ್ಯುತ್ ಸ್ಥಾವರಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಿರುವುದರಿಂದ ರಾಜ್ಯದ ಜಲ ವಿದ್ಯುತ್ ಸ್ಥಾವರಗಳಲ್ಲಿ ದಾಖಲೆಯ ವಿದ್ಯುತ್ ಉತ್ಪಾದನೆಯಾಗಿದೆ. ಹೊಸ ಸಾಧನೆಗೆ ಕಾರಣೀಕರ್ತರಾದ ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಅಭಿನಂದನಾರ್ಹರು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

## ಮನ್ಸಲಾಪುರು ಗ್ರಾಮದಲ್ಲಿ ನಾಲ್ಕು ಬಣವಿಗೆ ಅಕಸ್ಮಿಕ ಬೆಂಕಿ : ಲಕ್ಷಾಂತರ ಹಾನಿ

ಹಬ್ಬಿದೆ, ಗ್ರಾಮಸ್ಥರು ಬೆಂಕಿ ಹಚ್ಚಿದ ಕುರಿತು ಅಗ್ನಿ ಶಾಮಕ ದಳ ಅಧಿಕಾರಿಗೆ ಮಾಹಿತಿ ನೀಡಿದ್ದು ಬರುವಷ್ಟರಲ್ಲಿ ಬೆಂಕಿಯು ನಾಲ್ಕು ಬಣವೆಗಳಿಗೆ ತಗುಲಿ ಸಂಪೂರ್ಣ ಭಸ್ಮವಾಗಿವೆ. ಹತ್ತಿರದಲ್ಲಿ ಮನೆಯ ಒಂದು ಭಾಗಕ್ಕೆ ಹಾನಿಯಾಗಿದೆ. ಅಗ್ನಿ ಶಾಮಕ ದಳ ಸಿಬ್ಬಂದಿಗಳು ಬೆಂಕಿ ನಂದಿಸಲು ಹರ ಸಾಹಸ ಪಟ್ಟು ಬೆಂಕಿಯನ್ನು ನಂದಿಸಿದರು. ಗ್ರಾಮೀಣ ಪೊಲಿಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ಜರುಗಿದೆ.

## ಬಡವರಿಗೆ ವಸತಿ, ನಿವೇಶನ ಒದಗಿಸಲುಆಗ್ರಹಿಸಿ ರಾಜ್ಯದಾದ್ಯಂತ ಪ್ರತಿಭಟನೆ-ಮಾರೆಪ್ಪ ಹರವಿ

ಕಾಯುತ್ತಿದ್ದು, ಸರ್ಕಾರಗಳು ಭರವಸೆಗಳನ್ನು ಬಿಟ್ಟರೇ ಬೇರೇನೂ ನೀಡಿಲ್ಲ ಎಂದರು. ಸ್ವಾತಂತ್ರ್ಯ ಸೇನಾನಿ ಎಚ್.ಎಸ್.ದೊರೆಸ್ವಾಮಿ ಅವರು ಭೂ ವಂಚಿತರಿಗೆ ಕನಿಷ್ಠ ಎರಡು ಎಕರೆ ಭೂಮಿ ಸಿಗಬೇಕು, ರಾಜ್ಯದ ಜನರಿಗೆ ಭೂಮಿಯನ್ನು ಒದಗಿಸಿಕೊಡುವುವುದು ಅವರ ಜೀವನದ ಉದ್ದೇಶವಾಗಿತ್ತು ಇದಕ್ಕಾಗಿ ಹೋರಾಟಗಳು ನಡೆದಿವೆ. ಆದರೆ ಸರ್ಕಾರಗಳು ಮಾತ್ರ ಭೂಮಿ, ವಸತಿ ನೀಡದೇ ಬಡವರನ್ನು ನಿರ್ಲಕ್ಷಿಸುತ್ತಿದೆ ಎಂದರು. ಕಾರ್ಪೋರೇಟ್ ಕಂಪನಿಗಳಿಗೆ, ಶ್ರೀಮಂತರಿಗೆ ಭೂಮಿ ನೀಡಲು ಸಿಂಗಲ್ ವಿಂಡೋ ಸ್ಥಾಪಿಸಿ, ಬಡವರ ಭೂಮಿ ಹಕ್ಕಿನ ಕುರಿತು ಕಾನೂನು ನೆಪಗಳನ್ನು ಹೇಳುತ್ತಿವೆ. ಇತ್ತೀಚೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಕಾನೂನು ಬಿಗಿ ಇರುವ ಕಾರಣ ಭೂಮಿ ಕೊಡಲು ಆಗುವುದಿಲ್ಲ ಎಂಬ ಹೇಳಿಕೆ ನೀಡಿದ್ದು, ಇದು ಬಡವರಿಗೆ ಅನ್ಯಾಯ ಮಾಡುವ ಹುನ್ನಾರವಾಗಿದೆ. ಸರ್ಕಾರದಲ್ಲಿ ಕಾರ್ಪೋರೇಟ್, ಬಂಡವಾಳ ಶಾಹಿಗಳಿಗೆ ಭೂಮಿ ಕೊಡಲು ಅವಕಾಶ ಇದ್ದು, ಬಡವರಿಗೆ ನೀಡಲು ಕೊಡಲು ಆಗುವುದಿಲ್ಲ ಏಕೆ ಕೂಡಲೇ ಕಾನೂನು ಸಡಲಿಕೆ ಮಾಡಿ, ಭೂಮಿ ಮತ್ತು ವಸತಿಯನ್ನು ನೀಡಬೇಕು ಎಂದು ಆಗ್ರಹಿಸಿದರು. ಭೂಮಿ, ವಸತಿ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ನಿರ್ಲಕ್ಷ್ಯ ಮಾಡಿದ್ದೇ ಆದರೆ, ರಾಜ್ಯಾದ್ಯಂತ ಅನಿರ್ಧಿಷ್ಠಾವಧಿ ಹೋರಾಟಕ್ಕೆ ಕರೆ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಸಂಗದ ಪ್ರಮುಖರಾದ ಆಂಜನೇಯ್ಯ ಕುರುಬದೊಡ್ಡಿ, ರಂಗಾರೆಡ್ಡಿ, ಬಿ.ಎನ್.ಯರದಿಹಾಳ, ಹುಲಿಗೆಪ್ಪ ಮಡಿವಾಳ, ರಮೇಶ ಗಾಣದಾಳ, ಮಾರೆಮ್ಮ, ಭೀಮಣ್ಣ ಸೇರಿದಂತೆ ಅನೇಕರಿದ್ದರು.

## ಲೋಕಾಯುಕ್ತ ಬಲೆಗೆ ಸೀನಿಮೀಯ ರೀತಿಯಲ್ಲಿ ಆರೋಪಿಯ ಬಂಧನ

ಮೊಬೈಲ್ ಲೊಕೇಶನ್ ಟ್ರ್ಯಾಕ್ ಮಾಡಿ ಕವಿತಾಳದ ಸ್ನೇಹಿತನ ಮನೆಯಲ್ಲಿ ಅಡಗಿ ಕುಳಿತಿದ್ದ ಆರೋಪಿಯನ್ನು ಲಂಚದ ಹಣ ಸಮೇತ ಶುಕ್ರವಾರ ನಸುಕಿನ ಜಾವದಲ್ಲಿ ಬಂಧಿಸಿದರು. ಬಂಧಿತನನ್ನು ಪ್ರವಾಸಿ ಮಂದಿರದಲ್ಲಿ ವಿಚಾರಣೆ ನಡೆಸಿ, ನಂತರ ಆರೋಗ್ಯ ತಪಾಸಣೆಗಾಗಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಲೋಕಾಯುಕ್ತ ಡಿವೈಎಸ್‌ಪಿ ಪುರುಷೋತ್ತಮ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದ್ದು, ಸಿಬ್ಬಂದಿ ಸಹಕರಿಸಿದ್ದರು.

## ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮತದಾರರ ಹೆಸರು ಕೈಬಿಟ್ಟ ಆರೋಪ: ಚುನಾವಣಾ ಆಯೋಗಕ್ಕೆ ಪತ್ರ

ಪಾರದರ್ಶಕ ಕ್ಷೇತ್ರ ಪರಿಶೀಲನೆಗಳ ಬದಲು ''ತಾರ್ಕಿಕ ಸಾಮಂಜಸ್ಯ'' ಮತ್ತು ಅಲ್ಗಾರಿದಮ್ ಆಧಾರಿತ ವಿಧಾನಗಳನ್ನು ಬಳಸಿರುವುದು ಪ್ರಕ್ರಿಯೆಯ ನಂಬಿಕೆಗೆ ಧಕ್ಕೆ ತಂದಿದೆ ಎಂದು ಹೇಳಿದ್ದಾರೆ. ಹಿಂದಿನ ಕ್ರಮಗಳಿಗೆ ಭಿನ್ನವಾಗಿ, ಮತದಾರರನ್ನು ಶಂಕಿತರೆಂದು ಪರಿಗಣಿಸಿ, ತಾವು ಶಂಕಿತರಲ್ಲ ಎಂಬುದನ್ನು ಸಾಬೀತುಪಡಿಸುವ ಹೊರೆ ಅವರ ಮೇಲೇ ಹಾಕಲಾಗಿದೆ. ದೂರು ಸಲ್ಲಿಸಲು ಅವಕಾಶವಿದ್ದರೂ, ಪರಿಣಾಮಕಾರಿ ಪರಿಹಾರ ವ್ಯವಸ್ಥೆಗಳು ಲಭ್ಯವಿಲ್ಲ ಎಂದು ಉಲ್ಲೇಖಿಸಲಾಗಿದೆ. ಈ ಕ್ರಮದಿಂದ ಅಂಚಿನ ಸಮುದಾಯಗಳು ವಿಶೇಷವಾಗಿ ಮುಸ್ಲಿಮರು, ಮಹಿಳೆಯರು ಮತ್ತು ಆರ್ಥಿಕವಾಗಿ ಹಿಂದುಳಿದವರು, ಹೆಚ್ಚು ಹಾನಿಗೊಳಗಾಗಿದ್ದಾರೆ ಎಂದು ಸ್ವತಂತ್ರ ವಿಶ್ಲೇಷಣೆಗಳು ಸೂಚಿಸುತ್ತವೆ. ಮತದಾನದ ಹಕ್ಕು ಭಾರತೀಯ ಸಂವಿಧಾನದ ವಿಧಿ 326 ಅಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಪ್ರಜಾಸತ್ತಾತ್ಮಕ ಹಕ್ಕು ಆಗಿದ್ದು,

# ತುರಮುರಿ ತ್ಯಾಜ್ಯ ವಿಲೇವಾರಿ ಘಟಕ ತೆರವಿಗೆ ಆಗ್ರಹಿಸಿ ಬೆಳಗಾವಿಯಲ್ಲಿ ಬೃಹತ್ ಪ್ರತಿಭಟನೆ: ಡಿಸಿ ಭರವಸೆ

**ಬೆಳಗಾವಿ,ಏ.10**-ತಾಲೂಕಿನ ತುರಮುರಿ ಗ್ರಾಮ ದ ಹೊರವಲಯದಲ್ಲಿರುವ ತ್ಯಾಜ್ಯ ವಿಲೇ ವಾರಿ ಘಟಕದ ತೆರವಿಗೆ ಆಗ್ರಹಿಸಿ ನಗರದಲ್ಲಿ ಶುಕ್ರವಾರ ಸಾವಿರಾರು ಜನರು ಬೃಹತ್ ಪ್ರತಿಭಟನೆ ನಡೆಸಿ ದರು.



ನಗರದ ಸರ್ದಾರ್ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿದ ತುರಮರಿ, ಉಚಗಾಂವ, ಬಾಚಿ, ಕೋಣೆವಾಡಿ, ಸುಳಗಾ, ಗೋಜಗಾ, ಮಣ್ಣೂರ, ಕಲ್ಲೆಹೋಳ, ಅಂಬೇವಾಡಿ ಗ್ರಾಮಗಳ ಜನರು ಜಿಲ್ಲಾಡಳಿತದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಆಡಳಿತದ ವಿರುದ್ಧ ಧಿಕ್ಕಾರ ಕೂಗಿದರು. ವಿಶೇಷಚೇತನರು, ವೃದ್ಧರು, ಮಕ್ಕಳು, ಮಹಿಳೆಯರು ಸೇರಿದಂತೆ ಸುಮಾರು 3 ಸಾವಿರಕ್ಕೂ ಅಧಿಕ ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡು ತ್ಯಾಜ್ಯ ವಿಲೇವಾರಿ ಘಟಕ ತೆರವುಗೊಳಿಸುವಂತೆ ಒತ್ತಾಯಿಸಿದರು.

250 ಟನ್ ಸಾಮರ್ಥ್ಯದ ತ್ಯಾಜ್ಯ ವಿಲೇವಾರಿ ಘಟಕ ಇದಾಗಿದ್ದು, 66 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿದೆ. ಗೊಬ್ಬರ ಮತ್ತು ಪ್ಲಾಸ್ಟಿಕ್ ಪ್ರತ್ಯೇಕ ಮಾಡಿ ಕಸ ವಿಲೇವಾರಿ ಮಾಡಲಾಗುತ್ತಿದೆ. ಇಲ್ಲಿನ ತ್ಯಾಜ್ಯದಿಂದ ಸುತ್ತಲಿನ ಗ್ರಾಮಗಳಲ್ಲಿ ರೋಗಗಳು ಹರಡುತ್ತಿವೆ. ಶುದ್ಧ ಕುಡಿಯುವ ನೀರು ಮತ್ತು ಗಾಳಿ ಇಲ್ಲದೇ ಪರದಾಡುತ್ತಿದ್ದೇವೆ. ಕ್ಯಾನ್ಸರ್, ಲಿವರ್, ಕಿಡ್ನಿ ಹಾಗು ಉಸಿರಾಟದ ಸಮಸ್ಯೆ ಆಗುತ್ತಿದೆ. ಇದರಿಂದ ಸಾವಿನ ಸಂಖ್ಯೆ ಹೆಚ್ಚಳವಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ಸಂದರ್ಭದಲ್ಲಿ ಮಾಧ್ಯಮಗಳ ಜೊತೆಗೆ ಮಾತನಾಡಿದ ಮುಖಂಡ ಸಿದ್ದಪ್ಪ ಕಾಂಬಳೆ ಅವರು, ತ್ಯಾಜ್ಯ ವಿಲೇವಾರಿ ಘಟಕದಿಂದ ನಮಗೆ ಸಾಕಷ್ಟು ಸಮಸ್ಯೆ ಆಗುತ್ತಿದೆ. ತ್ಯಾಜ್ಯ ಬಾವಿ ಮತ್ತು ಬೋರ್ವೆಲ್‌ನಲ್ಲಿ ಸೇರಿ ನೀರು ಕಲುಷಿತಗೊಂಡಿದೆ. ಅಲ್ಲಿನ ಸುತ್ತಲೂ ಸಾವಿರಾರು ನಾಯಿಗಳಿವೆ. ನೊಣಗಳ ಕಾಟವೂ ಹೆಚ್ಚಿದೆ. ಈ ಎಲ್ಲಾ ಸಮಸ್ಯೆಯಿಂದಾಗಿ ಸಮೀಪದಲ್ಲಿರುವ ನಾಲ್ಕು ಶಾಲೆಗಳಿಗೆ ವಿದ್ಯಾರ್ಥಿಗಳೇ ಬರುತ್ತಿಲ್ಲ. ಈ ಘಟಕ ತೆರವು ಮಾಡುವವರೆಗೆ ಗ್ರಾ.ಪಂ, ತಾ.ಪಂ, ಜಿ.ಪಂ. ಚುನಾವಣೆ ಬಹಿಷ್ಕರಿಸಲು ನಾವು ನಿರ್ಣಯ ಕೈಗೊಂಡಿದ್ದೇವೆ ಎಂದರು.

ಸುಮಾರು 20 ವರ್ಷಗಳಿಂದ ಬೆಳಗಾವಿ ನಗರದ ಕಸವನ್ನು ತುರಮುರಿ ಘಟಕದಲ್ಲಿ ಸಂಗ್ರಹಿಸಲಾಗುತ್ತಿದೆ. ಇದರಿಂದ ಸುತ್ತಲಿನ ಗ್ರಾಮಗಳಲ್ಲಿ ವಾಯು ಮತ್ತು ಜಲ ಸಂಪೂರ್ಣ ಮಾಲಿನ್ಯವಾಗಿದೆ. ನಾವು ಅನೇಕ ಬಾರಿ ಹೋರಾಟ ಮಾಡಿ, ಜಿಲ್ಲಾಡಳಿತ, ಸಚಿವರು ಮತ್ತು ಶಾಸಕರಿಗೆ ಮನವಿ ಸಲ್ಲಿಸಿದರೂ ನಮ್ಮ ಸಮಸ್ಯೆ ಪರಿಹರಿಸುತ್ತಿಲ್ಲ. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಹಿಂದಿನ ಚುನಾವಣೆಯಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆ ಪ್ರಕಾರ ಈ ಘಟಕ ತೆರವುಗೊಳಿಸಬೇಕು. ಈಗಾಗಲೇ ಈ ಹೋರಾಟದಲ್ಲಿ ಒಮ್ಮೆ ಜೈಲಿಗೂ ಹೋಗಿ ಬಂದಿದ್ದೇವೆ. ಇನ್ಮುಂದೆ ಜೀವ ಹೋದರೂ ಹೋರಾಟದಿಂದ ಹಿಂದೆ ಸರಿಯಲ್ಲ ಎಂದು ಮತ್ತೋರ್ವ ಹೋರಾಟಗಾರ ಮಹಾಂತೇಶ ತಳವಾರ ಎಚ್ಚರಿಸಿದರು.

ಪರ್ಯಾಯ ಜಾಗ ಹುಡುಕುತ್ತಿದ್ದೇವೆ-ಡಿಸಿ: ಮನವಿ ಸ್ವೀಕರಿಸಿದ ಬಳಿಕ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು, ಇದು ಬಹಳ ಹಳೆಯ ಸಮಸ್ಯೆ. ತ್ಯಾಜ್ಯ ವಿಲೇವಾರಿ ಘಟಕ ಬೇರೆ ಕಡೆ ಸ್ಥಳಾಂತರಕ್ಕೆ ಈಗಾಗಲೇ ಸಿದ್ಧತೆ ನಡೆಸಿದ್ದೇವೆ. ನಾವು ಮತ್ತು ಜನಪ್ರತಿನಿಧಿಗಳು ನಿಮ್ಮ ಪರ ಇದ್ದೇವೆ. ಆದರೆ, ಏಕಾಏಕಿ ಒಂದೇ ದಿನದಲ್ಲಿ ಇಷ್ಟು ದೊಡ್ಡ ಘಟಕ ಸ್ಥಳಾಂತರ ಮಾಡುವುದು ಸುಲಭದ ಕೆಲಸವಲ್ಲ. ಇದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಪರ್ಯಾಯ ಜಾಗ ಹುಡುಕಬೇಕಾಗುತ್ತದೆ. ಅದೇ ರೀತಿ ಹೇಗೆ ಮತ್ತು ಎಲ್ಲಿ ಸ್ಥಳಾಂತರ ಮಾಡಬೇಕು ಎನ್ನುವುದನ್ನು ನಿಮ್ಮ ಜೊತೆಗೆ ಚರ್ಚಿಸಿ ನಿರ್ಧಾರ ತೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

# ಚಾಮುಂಡಿ ಬೆಟ್ಟದಲ್ಲಿನ ಕಾಮಗಾರಿ ತಕ್ಷಣ ಸ್ಥಗಿತಕ್ಕೆ ಹೈಕೋರ್ಟ್ ಸೂಚನೆ

**ಬೆಂಗಳೂರು,ಏ.10**-ನ್ಯಾಯಾಲಯಕ್ಕೆ ನೀಡಿದ್ದ ವಾಗ್ದಾನವನ್ನು ಮೀರಿ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿನ ದೇವಾಲಯದ ಆವರಣದಲ್ಲಿ ಕಾಮಗಾರಿ ನಡೆಸಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ವಿವಾದಿತ ಸ್ಥಳದಲ್ಲಿ ನಡೆಯುತ್ತಿರುವ ಎಲ್ಲ ರೀತಿಯ ನಿರ್ಮಾಣ ಚಟುವಟಿಕೆಯನ್ನು ತಕ್ಷಣ ಸ್ಥಗಿತಗೊಳಿಸಬೇಕು ಎಂದು ಮಧ್ಯಂತರ ಆದೇಶ ನೀಡಿದೆ.



ಚಾಮುಂಡಿ ಬೆಟ್ಟದ ಮೂಲ ಸ್ವರೂಪಕ್ಕೆ ಧಕ್ಕೆಯಾಗುವಂತಹ ಕಾಮಗಾರಿ ನಡೆಸಲಾಗುತ್ತಿದೆ ಎಂದು ಆಕ್ಷೇಪಿಸಿ ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕ ಸದಸ್ಯ ಪೀಠ ಈ ಆದೇಶ ಮಾಡಿದೆ.

ವಿವರವಾದ ಪ್ರಮಾಣಪತ್ರ ಸಲ್ಲಿಸಿ: ಅಲ್ಲದೆ, ದೇವಾಲಯದ ಆವರಣದಲ್ಲಿ ನಡೆಯುತ್ತಿರುವ ಎಲ್ಲ ರೀತಿಯ ನಿರ್ಮಾಣ ಕಾಮಗಾರಿಗಳನ್ನು ತಕ್ಷಣವೇ ನಿಲ್ಲಿಸಬೇಕು. ಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ 47 ಕೋಟಿ ರೂ.ಗಳನ್ನು ಯಾವ ಕೆಲಸಗಳಿಗೆ ಬಳಸಲಾಗಿದೆ, ಎಷ್ಟು ಹಣ ವೆಚ್ಚ ಮಾಡಲಾಗಿದೆ ಎಂಬ ಬಗ್ಗೆ ಎರಡು ವಾರಗಳಲ್ಲಿ ವಿವರವಾದ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಸರ್ಕಾರಕ್ಕೆ ಸೂಚಿಸಿದೆ.

ನ್ಯಾಯಾಲಯದ ಪೂರ್ವಾನುಮತಿಯಿಲ್ಲದೇ ಯಾವುದೇ ಶಾಶ್ವತ ಕಾಮಗಾರಿ ನಡೆಸುವುದಿಲ್ಲ ಎಂದು ಈ ಹಿಂದೆ ರಾಜ್ಯ ಸರ್ಕಾರ ಭರವಸೆ ನೀಡಿತ್ತು. ಆದರೆ, ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ಫೋಟೋಗಳನ್ನು ಗಮನಿಸಿದರೆ ದೇವಾಲಯದ ಆವರಣದಲ್ಲಿ ಬೃಹತ್ ಮಟ್ಟದ ಶಾಶ್ವತ ನಿರ್ಮಾಣ ಕಾರ್ಯ ನಡೆಯುತ್ತಿರುವ ಅಂಶ ಗೊತ್ತಾಗಲಿದೆ ಎಂದು ಪೀಠ ತಿಳಿಸಿದೆ.

ಕೋರ್ಟ್ ಆದೇಶ ಪಾಲನೆ ಜಿಲ್ಲಾಧಿಕಾರಿ ಕರ್ತವ್ಯ; ಕೇಂದ್ರ ಸರ್ಕಾರದಿಂದ 47 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂಬ ಕಾರಣ ನೀಡಿ ನಿರ್ಮಾಣ ಕಾರ್ಯವನ್ನು ಸಮರ್ಥಿಸಿಕೊಂಡಿದ್ದ ಜಿಲ್ಲಾಧಿಕಾರಿಗಳ ನಡೆಯು ದುರುದ್ದೇಶಪೂರಿತ ಮಾತ್ರವಲ್ಲ, ಕಾನೂನಿನಲ್ಲಿ ಸಂಪೂರ್ಣವಾಗಿ ಅಸಮರ್ಥನೀಯವೂ ಆಗಿದೆ. ಜಿಲ್ಲಾಧಿಕಾರಿಗಳು ರಾಜ್ಯದ ಅಧಿಕಾರಿಯಾಗಿದ್ದು, ನ್ಯಾಯಾಲಯದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅವರ ಆದ್ಯ ಕರ್ತವ್ಯವಾಗಿದೆ. ಆದೇಶ ಪಾಲಿಸದಿರುವುದನ್ನು ಸಮರ್ಥಿಸುವ ಯಾವುದೇ ಪ್ರಯತ್ನವು ನ್ಯಾಯಾಂಗ ಅಧಿಕಾರದ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಪೀಠ ಹೇಳಿದೆ.

ಇನ್ನೊಂದು ಪ್ರಕರಣದಲ್ಲಿ, ನೌಕರರ ರಾಜ್ಯ ವಿಮಾ ನಿಗಮ (ಇಎಸ್‌ಐಸಿ)ದ ಅಡಿಯ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ (ಸಬ್ಸಿಡಿ ದರ) ವೈದ್ಯಕೀಯ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಒಂದು ವರ್ಷ ಕಡ್ಡಾಯವಾಗಿ ಇಎಸ್‌ಐಸಿಗಳಲ್ಲಿ ಸೇವೆ ಸಲ್ಲಿಸಬೇಕು ಎಂದು ಹೊರಡಿಸಿದ್ದ ನಿಯಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಇಎಸ್‌ಐಸಿ ಸಲ್ಲಿಸಿದ್ದ ಮೇಲ್ಮನವಿ ಮಾನ್ಯ ಮಾಡಿದ ಮುಖ್ಯ

ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯಪೀಠ ಈ ಆದೇಶ ನೀಡಿದ್ದು, ಏಕಸದಸ್ಯ ಪೀಠದ ಆದೇಶವನ್ನು ರದ್ದುಪಡಿಸಿದೆ.

### ಬೆಂಗಳೂರಿನಲ್ಲಿ ಝೂಂಬಿ ಮಾದಕ ಪೂರೈಕೆ ಆರೋಪ

# ತಪ್ಪು ಸಂದೇಶದ ವಿಡಿಯೋ ಹರಿಬಿಟ್ಟಿದ್ದ ಆರೋಪಿಯ ಬಂಧನ

**ಬೆಂಗಳೂರು,ಏ.10**-ಸಾಮಾಜಿಕ ಜಾಲತಾಣದ ಮೂಲಕ ತಪ್ಪು ಸಂದೇಶದ ವಿಡಿಯೋ ಹಂಚಿಕೊಂಡಿದ್ದ ಆರೋಪಿಯನ್ನ ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ವ್ಯಕ್ತಿಯೊಬ್ಬ ಝೂಂಬಿಟಿ ಡ್ರಗ್ಸ್ ಅಥವಾ ಝೈಲಾಜಿನ್ ಸೇವಿಸಿದ್ದಾನೆ ಎಂದು ವಿಡಿಯೋ ಹರಿಬಿಟ್ಟಿದ್ದ ಆರೋಪದಡಿ ಹೇಮಂತ್ (29) ಎಂಬಾತನನ್ನ ಬಂಧಿಸಲಾಗಿದೆ.



ಬಾಗಲೂರು ರಸ್ತೆಯಲ್ಲಿ ವ್ಯಕ್ತಿಯೊಬ್ಬ ಮೈಮೇಲೆ ಪ್ರಜ್ಞೆ ಇಲ್ಲದವನಂತೆ ವಿಚಿತ್ರವಾಗಿ ಕೈ ಕಾಲುಗಳನ್ನು ಆಡಿಸುತ್ತಾ ನಿಂತಿದ್ದ. ಆತ ಎಲ್ಲಿಗೆ ಹೋಗುತ್ತಿದ್ದಾನೆ ಅಥವಾ ಏನು ಮಾಡುತ್ತಿದ್ದಾನೆ ಎಂಬ ಅರಿವಿಲ್ಲದಂತೆ ವರ್ತಿಸುತ್ತಿದ್ದುದನ್ನ ಕಂಡ ಆರೋಪಿ, ವಿದೇಶಗಳಲ್ಲಿ ಕಂಡುಬರುವ ಝೂಂಬಿಟಿ ಡ್ರಗ್ಸ್ ಅಥವಾ ಝೈಲಾಜಿನ್ ನಶೆಯಲ್ಲಿ ಈ ವ್ಯಕ್ತಿ ವಿಚಿತ್ರವಾಗಿ ವರ್ತನೆ ಮಾಡುತ್ತಿರಬಹುದು ಎಂದು ಶಂಕಿಸಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದ.

ಈ ಸಂಬಂಧ, ಬಾಗಲೂರು ಪೊಲೀಸ್ ಠಾಣೆಯ ಅಧಿಕಾರಿಗಳು ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಸಂಸ್ಥೆ ಸಮೀಪದಲ್ಲಿ ಆ ವ್ಯಕ್ತಿಯನ್ನು ಪತ್ತೆಹಚ್ಚಿ ವಶಕ್ಕೆ ಪಡೆದುಕೊಂಡು ತಕ್ಷಣ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದರು. ವೈದ್ಯಕೀಯ ವರದಿಗಳ ಪ್ರಕಾರ, ಆ ವ್ಯಕ್ತಿಯು ಯಾವುದೇ ಮಾದಕವಸ್ತು ಅಥವಾ ಮನೋಪ್ರೇರಕ ಪದಾರ್ಥಗಳನ್ನು ಸೇವಿಸಿರುವುದಿಲ್ಲ ಎಂದು ದೃಢಪಟ್ಟಿರುತ್ತದೆ. ವಿಚಾರಣೆ ವೇಳೆಯಲ್ಲಿ ಆ ವ್ಯಕ್ತಿಗೆ ಸಂಧಿವಾತ (ಆರ್ಥೈಟಿಸ್) ಇರುವುದಾಗಿ ತಿಳಿದುಬಂದಿದ್ದು, ವೈದ್ಯರು ನೀಡಿದ ನೋವು ನಿವಾರಕ ಔಷಧಗಳೊಂದಿಗೆ ಮದ್ಯ ಸೇವಿಸಿದ್ದರಿಂದ ಒಂದೇ ಕಡೆ ನಿಂತಿರುವ ಸ್ಥಿತಿಯಲ್ಲಿರುವಂತೆ ವಿಡಿಯೋದಲ್ಲಿ ಕಂಡುಬಂದಿರುವುದು ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಪ್ಪು ಮಾಹಿತಿ ನೀಡುವ ವಿಡಿಯೋ ಅಪ್ ಲೋಡ್ ಮಾಡಿದ್ದ ವ್ಯಕ್ತಿಯನ್ನು ಬಾಗಲೂರು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ತಾನು ಮಾಡಿದ್ದು ತಪ್ಪು ಎಂದು ಒಪ್ಪಿಕೊಂಡಿರುವ ಆತ, ಈಗ ಕ್ಷಮೆ ಯಾಚಿಸಿ ವಿಡಿಯೋ ಮಾಡಿದ್ದಾನೆ. ವಿದೇಶಗಳಲ್ಲಿ ಇಂತಹ ಡ್ರಗ್ಸ್ ಇದೆ ಎಂಬ ಕಾರಣಕ್ಕೆ ಆತ ಇಲ್ಲೂ ಅದೇ ರೀತಿ ಇರಬಹುದು ಎಂದು ಊಹಿಸಿ ವಿಡಿಯೋ ಮಾಡಿದ್ದಾನೆ. ಯಾರೇ ಆಗಲಿ ಆಧಾರರಹಿತ ಮಾಹಿತಿ ಅಥವಾ ವಿಡಿಯೋಗಳನ್ನು ಶೇರ್ ಮಾಡಬಾರದು. ಈ ಸುಳ್ಳು ವಿಡಿಯೋವನ್ನು ಯಾರೆಲ್ಲಾ ಶೇರ್ ಮಾಡಿದ್ದಾರೋ, ಅವರೆಲ್ಲರಿಗೂ ನೋಟಿಸ್ ನೀಡಲಿದ್ದೇವೆ. ಸಾರ್ವಜನಿಕರು ಇಂತಹ ಯಾವುದೇ ದೃಢೀಕರಿಸದ ವಿಡಿಯೋಗಳನ್ನು ನಂಬಬಾರದು ಮತ್ತು ಶೇರ್ ಮಾಡಬಾರದು ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಏಪ್ರಿಲ್ 7ರಂದು ಕೆಲಸ ಮುಗಿಸಿ ಬಾಗಲೂರಿಂದ ರಾಜನುಕುಂಟೆಗೆ ಹೋಗುತ್ತಿದ್ದಾಗ ನಿಟ್ಟೆ ಮೀನಾಕ್ಷಿ ಕಾಲೇಜು ಬಳಿ ಒಬ್ಬ ವ್ಯಕ್ತಿ ನಿಂತಲ್ಲೇ ನಿಂತಿದ್ದ. ನಾನು ಆ ವೀಡಿಯೋ ಸೆರೆ ಹಿಡಿದು ಆತ ಝೂಂಬಿ ಡ್ರಗ್ಸ್ ಸೇವಿಸಿದ್ದಾನೆ ಎಂದು ವೈರಲ್ ಮಾಡಿದ್ದೆ. ಕರ್ನಾಟಕದ ಜನತೆಯಲ್ಲಿ ಕ್ಷಮೆ ಕೇಳುವುದಾಗಿ ಆರೋಪಿ ಹೇಮಂತ್ ತಿಳಿಸಿದ್ದಾನೆ.

# ಸರ್ಕಾರಿ ಕೋಟಾದಲ್ಲಿ ಅಧ್ಯಯನ ನಡೆಸಿದ ವೈದ್ಯರಿಗೆ 1 ವರ್ಷ ಕಡ್ಡಾಯ ಸೇವೆ ಎತ್ತಿಹಿಡಿದ ಹೈಕೋರ್ಟ್

**ಬೆಂಗಳೂರು,ಏ.10**-ನೌಕರರ ರಾಜ್ಯ ವಿಮಾ ನಿಗಮ (ಇಎಸ್‌ಐಸಿ)ದ ಅಡಿಯ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ (ಸಬ್ಸಿಡಿ ದರ) ವೈದ್ಯಕೀಯ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಒಂದು ವರ್ಷ ಕಡ್ಡಾಯವಾಗಿ ಇಎಸ್‌ಐಸಿಗಳಲ್ಲಿ ಸೇವೆ ಸಲ್ಲಿಸಬೇಕು ಎಂದು ಹೊರಡಿಸಿದ್ದ ನಿಯಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.



ಈ ಸಂಬಂಧ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಇಎಸ್‌ಐಸಿ ಸಲ್ಲಿಸಿದ್ದ ಮೇಲ್ಮನವಿ ಮಾನ್ಯ ಮಾಡಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯಪೀಠ ಈ ಆದೇಶ ನೀಡಿದ್ದು, ಏಕಸದಸ್ಯ ಪೀಠದ ಆದೇಶವನ್ನು ರದ್ದುಪಡಿಸಿದೆ.

ಅಲ್ಲದೆ, 1 ವರ್ಷ ಕಡ್ಡಾಯ ಸೇವೆ ನೀಡುವುದಾಗಿ ವಿದ್ಯಾರ್ಥಿಗಳು ಬಾಂಡ್ ನೀಡಿದ್ದಾರೆ. ಕಡ್ಡಾಯ ಸೇವೆ ಮಾಡಲಾಗದವರು 5 ಲಕ್ಷ ರೂ. ಶುಲ್ಕ ನೀಡಲೂ ಅವಕಾಶವಿದೆ. ಬಾಂಡ್ ಪಡೆಯುವುದರಿಂದ ವಿದ್ಯಾರ್ಥಿಗಳ ಹಕ್ಕಿನ ಹರಣವಾಗಲಿದೆ ಎನ್ನಲಾಗುವುದಿಲ್ಲ ಎಂದು ಪೀಠ ಹೇಳಿದೆ.

ಮೊದಲು 5 ವರ್ಷಗಳ ಬಾಂಡ್ ಇತ್ತು, ನಂತರ 2020ರಿಂದ 1 ವರ್ಷಕ್ಕೆ ಪರಿವರ್ತಿಸಲಾಗಿದ್ದು, ಇದು ಸಂವಿಧಾನದ ಕಲಂ 19(1)(ಜಿ) ಅನ್ವಯ ವೃತ್ತಿ ಆಯ್ಕೆಯ ಹಕ್ಕು ಅಥವಾ ಕಲಂ 23 ಜೀತ ಕಾರ್ಮಿಕ ನಿಷೇಧದಡಿ ವಿದ್ಯಾರ್ಥಿಗಳ ಹಕ್ಕುಗಳನ್ನು ಉಲ್ಲಂಘನೆಯಾಗದು. ಸಬ್ಸಿಡಿ ದರದಲ್ಲಿ ಶಿಕ್ಷಣ ಪಡೆಯುವ ಭಾಗವಾಗಿ ಸೇವಾ ಬಾಂಡ್ ಅನ್ನು ಜಾರಿಗೊಳಿಸುವುದು ಬಾಂಡೆಡ್ ಲೇಬರ್ ಎಂಬ ತೀರ್ಮಾನಕ್ಕೆ ಬರಲು ಕಾನೂನಿನಲ್ಲಿ ಯಾವುದೇ ಆಧಾರವಿಲ್ಲ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಶಿಕ್ಷಣದ ವೆಚ್ಚವನ್ನು ಭರಿಸಲು ವಿದ್ಯಾರ್ಥಿಗಳು ಅಧ್ಯಯನ ಸಾಲಗಳನ್ನು ಪಡೆಯುವುದು ಸಾಮಾನ್ಯವಾಗಿದೆ. ವೈದ್ಯಕೀಯ ಪದವಿ ಅರ್ಹತೆಗಳನ್ನು ಪಡೆದ ನಂತರ ಸಾಲವನ್ನು ಮರುಪಾವತಿಸುವ ಜವಾಬ್ದಾರಿ ಬಾಂಡೆಡ್ ಲೇಬರ್ ಎಂದು ಹೇಳಲಾಗುವುದಿಲ್ಲ. ಆದರೂ ಆದಾಯದ ಗಣನೀಯ ಭಾಗವನ್ನು ವಿದ್ಯಾರ್ಥಿಗಳು ಸಾಲ ತೀರಿಸಲು ಬಳಸಬಹುದು ಎಂದು ಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಇಎಸ್‌ಐಸಿ ತನ್ನ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಬ್ಸಿಡಿ ಶುಲ್ಕದಲ್ಲಿ ಶಿಕ್ಷಣ ಪಡೆದಿರುವುದನ್ನು ಪರಿಗಣಿಸಿ, ಕನಿಷ್ಠ ಒಂದು ವರ್ಷ ಸೇವಾ ಅವಧಿಯನ್ನು ಪೂರೈಸಬೇಕು ಎಂದು ಒತ್ತಾಯಿಸಬಹುದು. ವಿದ್ಯಾರ್ಥಿಗಳು ಒಂದು ವರ್ಷ ತಮ್ಮ ಸೇವೆ ಸಲ್ಲಿಸುವಲ್ಲಿ ವಿಫಲರಾದರೆ, ಇಎಸ್‌ಐಸಿ ಅಂತಹ ವಿದ್ಯಾರ್ಥಿಗಳು ಪಾವತಿಸಬೇಕಾದ ಪರಿಹಾರವನ್ನು 5 ಲಕ್ಷ ರೂ.ಗಳಿಗೆ ನಿಗದಿಪಡಿಸಿರುವುದು ಸೂಕ್ತವಾಗಿಯೇ ಇದೆ ಎಂದು ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: ಅಭಿಷೇಕ್ ಚೌಧರಿ ಮತ್ತಿತರರು ಬೆಂಗಳೂರಿನ ರಾಜಾಜಿನಗರ ಇಎಸ್‌ಐಸಿ ವೈದ್ಯಕೀಯ ಕಾಲೇಜಿನಲ್ಲಿ ಸರ್ಕಾರಿ ಕೋಟಾದಡಿ 2012-13ನೇ ಸಾಲಿನಲ್ಲಿಎಂಬಿಬಿಎಸ್ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದರು. ಸರ್ಕಾರದ ನಿಯಮದಂತೆ 5 ವರ್ಷ ಕಡ್ಡಾಯ ಸೇವೆ ಅಥವಾ 7.50 ಲಕ್ಷ ರೂ. ದಂಡ ಪಾವತಿಸುವುದಾಗಿ ಬಾಂಡ್ ಬರೆದುಕೊಟ್ಟಿದ್ದರು. 2018ರಲ್ಲಿ ವೈದ್ಯಕೀಯ ಪದವಿ ಪೂರೈಸಿದ್ದರು. ಅವರು ಇಎಸ್‌ಐಸಿಗೆ ಸಲ್ಲಿಸಿದ್ದ ಬಾಂಡ್‌ನಂತೆ ಬೇರೆ ಬೇರೆ ಆಸ್ಪತ್ರೆಗಳಿಗೆ ನಿಯೋಜಿಸಲಾಗಿತ್ತು. ಅವರು ಸರ್ಕಾರದ ನಿಯಮದಂತೆ ಒಂದು ವರ್ಷ ಸೇವೆ ಸಲ್ಲಿಸಲು ಬದ್ಧರಾಗಿದ್ದೇವೆ. ಆದರೆ ಇಎಸ್‌ಐಸಿ 5 ವರ್ಷ ಸೇವೆಗೆ ಒತ್ತಾಯಿಸುತ್ತಿರುವುದು ಸರಿಯಲ್ಲ ಎಂದು ಸೇವಾ ಬಾಂಡ್ ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ಪೀಠ 2020ರಲ್ಲಿ ಕಡ್ಡಾಯ ಸೇವೆ ಅಗತ್ಯವಿಲ್ಲ ಎಂದು ಆದೇಶಿಸಿತ್ತು. ಹಾಗಾಗಿ ಇಎಸ್‌ಐಸಿ ಮೇಲ್ಮನವಿ ಸಲ್ಲಿಸಿತ್ತು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L